ಖಾಸಗಿ ಪ್ರಸಾರ



# ಶ್ರೀದೇವಿ ಅಂತರಂಗ

ಸೇವೆ - ಶಿಕ್ಷಣ - ಅಧ್ಯಾತ್ಮದ ಜೊತೆಗೆ ಪಯಣ

ಮಾಸಪತ್ರಿಕೆ
ಸಂಪುಟ 1, ಸಂಚಿಕೆ 7
ಮೇ 2023

SHRIDEVI ANTARANGA
Monthly Magazine

SHRIDEVI EDUCATION






ಪ್ರಧಾನ ಸಂಪಾದಕರ ಅಂತರಂಗ

ಡಾ. ಎಂ.ಆರ್. ಹುಲಿನಾಯ್ಕರ್
ಸಂಸ್ಥಾಪಕ ಅಧ್ಯಕ್ಷರು
ಶ್ರೀದೇವಿ ಶಿಕ್ಷಣ ಸಂಸ್ಥೆಗಳ ಸಮೂಹ

**ಮತದಾರ ಪ್ರಬುದ್ಧನಾದಷ್ಟು ಚುನಾವಣೆಗಳು ಪಾರದರ್ಶಕವಾಗುತ್ತವೆ. ಅದರಿಂದ ಅಚ್ಚರಿಯ ಫಲಿತಾಂಶ ಸಹ ಕಂಡುಬರುತ್ತದೆ.**

## ಜನತೆಯ ವಿಶ್ವಾಸಾರ್ಹತೆಯೇ ರಾಜಕೀಯ ಪಕ್ಷದ ಸಂಪನ್ಮೂಲ



ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ಕರ್ನಾಟಕದ 16ನೇ ವಿಧಾನಸಭೆಗೆ 2023ರಲ್ಲಿ ನಡೆದ ಚುನಾವಣೆ ಎಲ್ಲ ರೀತಿಯಿಂದಲೂ ಅತ್ಯಂತ ಯಶಸ್ವಿಯಾಗಿದೆ. ಮೇ 10ರಂದು 224 ಕ್ಷೇತ್ರಗಳಿಗೆ ಮತದಾನವಾಯಿತು. ಮೇ 13ರಂದು ಫಲಿತಾಂಶ ಪ್ರಕಟವಾಯಿತು. ಮೇ 20ರಂದು 135 ಸ್ಥಾನಗಳನ್ನು ಗೆದ್ದಿರುವ ಕಾಂಗ್ರೆಸ್ ಪಕ್ಷದ ನಾಯಕರಾದ ಶ್ರೀ ಸಿದ್ದರಾಮಯ್ಯ ಅವರು ರಾಜ್ಯದ 31ನೇ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದರು. ಜೊತೆಯಲ್ಲಿ ಉಪಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್ ಸಹ ಅಧಿಕಾರಗ್ರಹಣ ಮಾಡಿದ್ದಾರೆ. ಇದೊಂದು ಅಭೂತಪೂರ್ವ ವಿಜಯವಾಗಿದ್ದು ಯಾರೂ ಇಂತಹ ಫಲಿತಾಂಶವನ್ನು ನಿರೀಕ್ಷೆ ಮಾಡಿರಲಿಲ್ಲ. ಇಂತಹ ವಿಜಯಕ್ಕೆ ಮಾನ್ಯ ಸಿದ್ದರಾಮಯ್ಯ ಮತ್ತು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಶ್ರೀ ಡಿ.ಕೆ.ಶಿವಕುಮಾರ್ ಮತ್ತು ಅಸಂಖ್ಯಾತ ಕಾರ್ಯಕರ್ತರು ಕಾರಣೀಭೂತರಾಗಿದ್ದಾರೆ. ಅವರನ್ನೆಲ್ಲಾ ಅಭಿನಂದಿಸಬೇಕಾಗಿದೆ.

ಕರ್ನಾಟಕದಲ್ಲಿ ಪ್ರಜಾಪ್ರಭುತ್ವದ ಹಬ್ಬ ಅತ್ಯಂತ ಯಶಸ್ವಿಯಾಗಿದೆ. ಇದೊಂದು ಸಂತಸದ ವಿಚಾರ. ಕರ್ನಾಟಕ ವಿಧಾನಸಭಾ ಚುನಾವಣೆ ಕೇವಲ ರಾಜ್ಯದ ಚುನಾವಣೆಯೆಂದು ವಿಶ್ಲೇಷಿಸುವ ಹಾಗಿಲ್ಲ. ಈ ಚುನಾವಣೆ ರಾಷ್ಟ್ರದ ಅನೇಕ ನಾಯಕರ ಮತ್ತು ರಾಜಕೀಯ ವಿಶ್ಲೇಷಕರ ಗಮನ ಸೆಳೆದಿತ್ತು. ಈ ಚುನಾವಣೆಯಲ್ಲಿ ಕರ್ನಾಟಕದ ಮತದಾರ ಯಾವುದೇ ಭಾವನಾತ್ಮಕ ವಿಚಾರಗಳಿಗೆ ತಲೆ ಕೆಡಿಸಿಕೊಂಡಿಲ್ಲ. ಆತ ಚಲನಚಿತ್ರನಟರು ಮತ್ತು ಸೆಲೆಬ್ರಟರಿಗಳನ್ನು ನೋಡಿದ್ದಾನೆ. ಅವರಿಂದ ಪ್ರಭಾವಿತನಾಗಿಲ್ಲ. ಮತದಾರ ಜಾತಿ, ಮತ, ಧರ್ಮವನ್ನು ಮೀರಿ ಚಿಂತಿಸಿದ್ದಾನೆ ಎಂಬುದಕ್ಕೆ ಹಲವು ಕ್ಷೇತ್ರಗಳ ಫಲಿತಾಂಶವೇ ಸಾಕ್ಷ್ಯ ನೀಡಿದೆ. ಇಂತಹ ಪ್ರಬುದ್ಧ ಮತದಾರರು ಯಾವುದೇ ರಾಷ್ಟ್ರಕ್ಕೆ ಭೂಷಣ. 1985ರಲ್ಲೂ ಕರ್ನಾಟಕದ ಮತದಾರ ಇಂತಹುದೇ ಪ್ರಬುದ್ಧತೆಯನ್ನು ತೋರಿದ್ದನ್ನು ಜ್ಞಾಪಿಸಿಕೊಳ್ಳಬಹುದು. ಮತದಾರ ಪ್ರಬುದ್ಧನಾದಷ್ಟು ಚುನಾವಣೆಗಳು ಪಾರದರ್ಶಕವಾಗುತ್ತವೆ. ಅದರಿಂದ ಅಚ್ಚರಿಯ ಫಲಿತಾಂಶ ಸಹ ಕಂಡುಬರುತ್ತದೆ.

ಈ ಸಲದ ಚುನಾವಣೆಯಲ್ಲಿ ಆಡಳಿತದ ಚುಕ್ಕಾಣಿ ಹಿಡಿದ ಕಾಂಗ್ರೆಸ್ ಪಕ್ಷ 1,67,89,272 ಮತಗಳನ್ನು ಗಳಿಸಿದೆ. ಮತ ಚಲಾವಣೆಯಲ್ಲಿ ಶೇಕಡ 43ರಷ್ಟು ಮತವನ್ನು ಕಾಂಗ್ರೆಸ್ ಪಕ್ಷ ಪಡೆದಿದೆ. ಭಾರತೀಯ ಜನತಾ ಪಕ್ಷ ಅರ್ಥಾತ್ ಬಿಜೆಪಿ 1,40,96,529 ಮತಗಳನ್ನು ಪಡೆದಿದೆ. ಅಂದರೆ ಚಲಾವಣೆಯಾದ ಮತದಲ್ಲಿ ಅದರ ಪಾಲು ಶೇಕಡ 33ರಷ್ಟು. ಇನ್ನು ಜಾತ್ಯತೀತ ಜನತಾದಳ ಅಂದರೆ ಜೆಡಿಎಸ್ 52,05,489 ಮತಗಳನ್ನು ಪಡೆದಿದೆ. ಅದರ ಶೇಕಡಾವಾರು ಪ್ರಮಾಣ 13.22ರಷ್ಟು. 2018ರಲ್ಲಿ ಬಿಜೆಪಿ ಶೇಕಡ 36.22ರಷ್ಟು ಮತ ಗಳಿಸಿತು. ಈ ಸಲ ಶೇಕಡ 33ರಷ್ಟು ಮಾತ್ರ ಪಡೆಯಲು ಸಾಧ್ಯವಾಗಿದೆ.

▶▶ 6ನೇ ಪುಟಕ್ಕೆ...

# ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಶ್ರೀದೇವಿ ವಿದ್ಯಾಮಂದಿರದ ವಿದ್ಯಾರ್ಥಿಗಳ ಉತ್ತಮ ಸಾಧನೆ



■ ವಿಜಯಕುಮಾರ್. ಆರ್.
ಮುಖ್ಯೋಪಾಧ್ಯಾಯರು,
ಶ್ರೀದೇವಿ ವಿದ್ಯಾಮಂದಿರ

ತುಮಕೂರಿನ ಶ್ರೀದೇವಿ ವಿದ್ಯಾಮಂದಿರದ ವಿದ್ಯಾರ್ಥಿಗಳು ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಅತ್ಯುತ್ತಮ ಶ್ರೇಣಿಯಲ್ಲಿ ಫಲಿತಾಂಶವನ್ನು ಪಡೆದಿದ್ದಾರೆ. ಅವರುಗಳೆಂದರೆ ದೀಪಕ್ ಸಿ, 595 (95.2%), ಸುಹಾಲಿಯ ಫರ್ವಿನ್ 593 (94.8%), ಲಿಖಿತ.ಆರ್ 572 (91.5%), ಹರಿಕೃಷ್ಣ ಐ.ಆರ್. 569 (91.04%), ಗಗನ್ ಎಂ 564 (90.2%), ಸೃಷ್ಟಿ ಡಿ 544 (87.04%), ಹರೀಶ್‌ಕುಮಾರ್. ಆರ್ 543 (86.8%), ವಾಣಿ ಜೆ. 542 (86.7%) ಡಿಸ್ಟಿಂಕ್ಷನ್‌ನಲ್ಲಿ ಅತ್ಯುತ್ತಮ ಸಾಧನೆ ಮಾಡಿದ್ದಾರೆ. ಪ್ರಥಮ ದರ್ಜೆಯಲ್ಲಿ ಸುಹಾಸ್.ಜೆ 510 (81.6%), ಹರ್ಷಿತ ಆರ್ 498 (79.6%), ಯೋಗಾನಂದ ಬಿ.ಎಲ್ 439 (70.2%), ಪುಷ್ಪ ವಿ, 407 ( 65.12%), ದೀಕ್ಷಿತ್ 407 (65.12%) ಸಾನಿಯ ಫೀರ್‌ದೋಸ್ 400 (64.0%) ಅಂಕಗಳನ್ನು ಪಡೆದು ಅತ್ಯುತ್ತಮ ಶ್ರೇಣಿಯಲ್ಲಿ ಉತ್ತೀರ್ಣರಾಗಿ ಆಯ್ಕೆಯಾಗಿದ್ದಾರೆ ಹಾಗೂ ಡಿಸ್ಟಿಂಕ್ಷನ್ 08, ಪ್ರಥಮ ದರ್ಜೆ 06, ಒಟ್ಟಾರೆಯಾಗಿ ಶೇ 83.33ರಷ್ಟು ಉತ್ತೀರ್ಣರಾಗಿದ್ದಾರೆ.

### ಶ್ರೀದೇವಿ ವಿದ್ಯಾಮಂದಿರ ಬೆಳೆದು ಬಂದ ರೀತಿ

ಲೋಕೋಪಕಾರಿ, ಸೇವೆ ಮತ್ತು ಅಭಿವೃದ್ಧಿಯ ಪ್ರತೀಕವಾಗಿರುವ ನಮ್ಮ ಜಿಲ್ಲೆಯ ಸಾಧಕರಾದ ಡಾ.ಎಂ.ಆರ್.ಹುಲಿನಾಯ್ಕರ್ ಅವರು ವೃತ್ತಿಯಲ್ಲಿ ವೈದ್ಯರಾದರೂ ಸಮಾಜಸೇವೆಯಲ್ಲಿ ಆಸಕ್ತರು. 1992ರಲ್ಲಿ ಶಿಕ್ಷಣ ಕ್ಷೇತ್ರವನ್ನು ಪ್ರವೇಶಿಸಿದರು. ಅವರು ಧರ್ಮಪತ್ನಿ ಶ್ರೀಮತಿ ಶಾಂತಾದುರ್ಗಾದೇವಿಯವರ ಅಭಿಲಾಷೆಯಂತೆ 2000–01ನೇ ಸಾಲಿನಲ್ಲಿ ಶ್ರೀ ಶ್ರೀದೇವಿ ವಿದ್ಯಾಮಂದಿರ ಶಾಲೆಯನ್ನು ಆರಂಭಿಸಿದರು. ಪೂರ್ವ ಪ್ರಾಥಮಿಕದಿಂದ ಹತ್ತನೇ ತರಗತಿಯವರೆಗೆ ಇಲ್ಲಿ ಮಕ್ಕಳಿಗೆ ಶಿಕ್ಷಣ ನೀಡಲಾಗುತ್ತಿದೆ. ಶ್ರೀದೇವಿ ವಿದ್ಯಾಮಂದಿರ ಶಿರಾ ಗೇಟ್ ಮತ್ತು ಸುತ್ತಮುತ್ತಲಿನಲ್ಲಿ ವಾಸವಿರುವ ಗ್ರಾಮೀಣ ಪ್ರದೇಶದ ಮಕ್ಕಳ ಭವಿಷ್ಯವನ್ನು ರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತಿದೆ. ಆರ್ಥಿಕವಾಗಿ ದುರ್ಬಲ ಕುಟುಂಬ ಮಕ್ಕಳು ಈ ಶಾಲೆಗೆ ಬರುತ್ತಾರೆ. ಉತ್ತಮವಾದ ಶಿಕ್ಷಣದ ಜೊತೆ ಇಲ್ಲಿ ಶಾಲಾ ವಾಹನದ ವ್ಯವಸ್ಥೆ, ಆಟದ ಮೈದಾನ, ಕಂಪ್ಯೂಟರ್ ಶಿಕ್ಷಣ, ದೈಹಿಕ ಶಿಕ್ಷಣ, ಯೋಗ ಶಿಕ್ಷಣ ಮುಂತಾದ ಪಠ್ಯೇತರ ಸೌಲಭ್ಯಗಳನ್ನು ಮಕ್ಕಳಿಗೆ ನೀಡಲಾಗುತ್ತದೆ. ಎಸ್.ಎಸ್.ಎಲ್.ಸಿ.ಯಲ್ಲಿ ಪ್ರತಿ ವರ್ಷವೂ ಉತ್ತಮ ಫಲಿತಾಂಶ ಬರುತ್ತಿದೆ.

ಕರ್ನಾಟಕ ಸರ್ಕಾರದ ಉದ್ದೇಶದಂತೆ ಈ ಶಾಲೆಯಲ್ಲಿ 2012–13ನೇ ಸಾಲಿನಿಂದ ಆರ್.ಟಿ.ಇ ಅಡಿಯಲ್ಲಿ ಎಲ್.ಕೆ.ಜಿ ಮತ್ತು 1ನೇ ತರಗತಿಯಿಂದ 8ನೇ ತರಗತಿಯವರೆಗೆ ಮಕ್ಕಳನ್ನು ದಾಖಲಾತಿ ಮಾಡಿಕೊಂಡು ಅವರಿಗೆ ಶಿಕ್ಷಣ ನೀಡಲಾಗುತ್ತಿದೆ.

ಶ್ರೀದೇವಿ ವಿದ್ಯಾಮಂದಿರ 2013ರಿಂದ ಇಲ್ಲಿಯವರೆಗೂ ಅತ್ಯುತ್ತಮ ಫಲಿತಾಂಶ ಪಡೆದಿರುವ ಕಾರಣ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ "ಪ್ರತಿಭಾವಂತ ವಿದ್ಯಾರ್ಥಿಗಳಿಗೆ" ನೀಡುವ ಪುರಸ್ಕಾರವನ್ನು ಇಲ್ಲಿನ ಮಕ್ಕಳು ಪಡೆದಿದ್ದಾರೆ. ಗುಣಮಟ್ಟದ ಶಿಕ್ಷಣ ನೀಡುತ್ತಾ ಬಂದಿರುವ ಕಾರಣ ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣನಿಧಿ ಮತ್ತು ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿ ಬೆಂಗಳೂರು, ಇವರು ಈ ಈ ಶಿಕ್ಷಣ ಸಂಸ್ಥೆಗೆ 'ಅಭಿನಂದನಾ ಫಲಕ' ನೀಡಿದ್ದಾರೆ. ಈ ಶಾಲೆಯಲ್ಲಿ ಸುಮಾರು 23 ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ.

ಈ ಸಂಸ್ಥೆಯಲ್ಲಿ ಎಲ್.ಕೆ.ಜಿಯಿಂದ 10ನೇ ತರಗತಿವರೆಗೆ ವ್ಯಾಸಂಗ ಮಾಡಿದ ಸುಪ್ರೀತ್. ಎಂ ಎನ್ನುವ ವಿದ್ಯಾರ್ಥಿ ಸರ್ಕಾರಿ ಕೋಟಾದಡಿ ಆಯ್ಕೆಯಾಗಿ ವೈದ್ಯಕೀಯ ಸೀಟ್ ಪಡೆದು ಅಲ್ಲೂ ಯಶಸ್ವಿಯಾಗಿ ಶಿಕ್ಷಣ ಮುಗಿಸಿರುವುದು ಸಂತೋಷದ ವಿಚಾರ.


▶▶ 6ನೇ ಪುಟಕ್ಕೆ...



ದೀಪಕ್ ಸಿ
595 (95.2%)



ಸುಹಾಲಿಯ ಫರ್ವಿನ್
593 (94.8%)



ಲಿಖಿತ.ಆರ್
572 (91.5%)



ಹರಿಕೃಷ್ಣ ಐ.ಆರ್.
569 (91.04%)



ಗಗನ್ ಎಂ
564 (90.2%)



ಸೃಷ್ಟಿ ಡಿ
544 (87.04%)



ಹರೀಶ್‌ಕುಮಾರ್. ಆರ್
543 (86.8%)



ವಾಣಿ ಜೆ.
542 (86.7%)

**ಜೀವನ ಕ್ಷಣಿಕ ಮತ್ತು ದುಃಖಮಯ, ಇಂತಹ ದುಃಖಕ್ಕೆ ಮುಖ್ಯಕಾರಣ ಮನುಷ್ಯರಲ್ಲಿರುವ ದುರಾಸೆ, ಅದನ್ನು ದಮನ ಮಾಡಿದರೆ ನಿರ್ವಾಣ ಹೊಂದಬಹುದು ಎನ್ನುವ ರಹಸ್ಯವನ್ನು ಆತ ಎಲ್ಲರಿಗೂ ಹೇಳಿದ.**

# ಪ್ರೀತಿ, ದಯೆಗಳ ಸಾಕಾರಮೂರ್ತಿ ಭಗವಾನ್ ಬುದ್ಧ

**ಸಂಪಾದಕರ ವಾಣಿ**



**ಅಂಬಿಕಾ ಎಂ ಹುಲಿನಾಯ್ಕರ್**
ಆಡಳಿತಾಧಿಕಾರಿ,
ಶ್ರೀದೇವಿ ಇಂಜಿನಿಯರಿಂಗ್ ಕಾಲೇಜು

ವಿಶ್ವದ ಜನತೆಗೆ ಜ್ಞಾನದ ಬೆಳಕನ್ನು ನೀಡಿದ ಗೌತಮ ಬುದ್ಧ ಕ್ರಿ.ಪೂ. 567ರಲ್ಲಿ ಜನಿಸಿದನು. ಅವನ ಜನ್ಮದಿನವನ್ನು 'ಬುದ್ಧ ಪೂರ್ಣಿಮೆ' ಎಂದು ಜಗತ್ತಿನಾದ್ಯಂತ ಆಚರಿಸಲಾಗುತ್ತದೆ. ಈ ವರ್ಷ ಬುದ್ಧ ಪೂರ್ಣಿಮೆ ಮೇ 5ರಂದು ಬಂದಿದೆ. ಭಗವಾನ್ ಬುದ್ಧ ವೈಶಾಲ ಪೂರ್ಣಿಮೆಯಂದು ಇಂದಿನ ನೇಪಾಳದ ಲುಂಬಿನಿವನದಲ್ಲಿ ಜನಿಸಿದನು. ಈ ವರ್ಷದ ಬುದ್ಧ ಪೂರ್ಣಿಮೆಯಂದು ಚಂದ್ರಗ್ರಹಣ ಬಂದಿತ್ತು, ಆದರೆ ಅದು ಭಾರತದಲ್ಲಿ ಗೋಚರಿಸಲಿಲ್ಲ. ಬುದ್ಧನ ಅನುಯಾಯಿಗಳು ಎಲ್ಲೆಡೆ ಬುದ್ಧ ಪೂರ್ಣಿಮೆಯ ದಿನದಂದು ದೀಪ ಬೆಳಗಿಸುವುದರ ಮೂಲಕ ಬುದ್ಧನ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸುತ್ತಾರೆ. ಭಗವಾನ್ ಬುದ್ಧ ಜ್ಞಾನಜ್ಯೋತಿಯ ಸಂಕೇತ. ಭಗವಾನ್ ಬುದ್ಧನ ಈ ಪೂರ್ಣಿಮೆಯ ವೈಶಿಷ್ಟ್ಯವೆಂದರೆ ಅಂದು ಆತ ಹುಟ್ಟಿದ, ಮುಂದೆ ಆತನಿಗೆ ಆ ದಿನವೇ ಜ್ಞಾನೋದಯವಾಯಿತು. ಅವನು ನಿರ್ವಾಣ ಹೊಂದಿದ ದಿನವೂ ಪೂರ್ಣಿಮೆಯೇ ಆಗಿದೆ. ಹೀಗಾಗಿ ಬೌದ್ಧಧರ್ಮದಲ್ಲಿ 'ಪೂರ್ಣಿಮೆಗೆ' ವಿಶೇಷವಾದ ಮಹತ್ವವಿದೆ.

ಬುದ್ಧನ ತಂದೆಯ ಹೆಸರು ಶುದ್ಧೋಧನ. ಬುದ್ಧನ ಮೊದಲ ಹೆಸರು ಸಿದ್ಧಾರ್ಥ. ಆತನ ತಾಯಿ ಮಾಯಾದೇವಿ. ಶುದ್ಧೋಧನ ಹಿಮಾಲಯದ ತಪ್ಪಲಲ್ಲಿ ಆಳುತ್ತಿದ್ದ ಶಾಕ್ಯವಂಶದ ಅರಸ. ಅವನ ರಾಜಧಾನಿ ಕಪಿಲವಸ್ತು. ರಾಜ ಶುದ್ಧೋಧನ ತನ್ನ ಮಡದಿ ಮಾಯಾದೇವಿಯನ್ನು ಹೆರಿಗೆಗೆ ತವರು ಮನೆಗೆ ಕಳುಹಿಸಿದ. ದಾರಿ ಮಧ್ಯದಲ್ಲಿನ ಲುಂಬಿನಿವನದಲ್ಲಿ ಹೆರಿಗೆಯಾಗಿ ಗಂಡು ಮಗು ಜನಿಸಿತು. ಮಾಯಾದೇವಿ ಮರಣ ಹೊಂದಿದಳು. ಮಗುವಿಗೆ ಸಿದ್ಧಾರ್ಥ ಎಂದು ನಾಮಕರಣ ಮಾಡಲಾಯಿತು. ಈ ಮಗುವನ್ನು ಅದರ ಚಿಕ್ಕಮ್ಮ ಪ್ರಜಾಪತಿ ಗೌತಮಿ ತಾಯಿಗಿಂತ ಹೆಚ್ಚಾಗಿ ಪ್ರೀತಿ ಮಾಡಿ ಸಲಹಿದಳು. ಆಕೆಯ ಹೆಸರೇ ಗೌತಮ ಬುದ್ಧನಿಗೂ ಬಂತು. ಸಿದ್ಧಾರ್ಥನಿಗೆ ಹದಿನಾರು ವರ್ಷ ತುಂಬಿದಾಗ ಯಶೋಧರೆ ಎಂಬ ಕನ್ಯೆಯ ಜೊತೆ ವಿವಾಹವಾಯಿತು. ಹತ್ತು ವರ್ಷಗಳ ದಾಂಪತ್ಯ ಜೀವನ ಸುಖಕರವಾಗಿತ್ತು. ಅವರಿಗೆ 'ರಾಹುಲ' ಎಂಬ ಮಗ ಸಹ ಜನಿಸಿದ.

ಸಿದ್ಧಾರ್ಥ ಬಾಲ್ಯದಿಂದಲೂ ಚಿಂತನಾಪರವಾದ ವ್ಯಕ್ತಿ. ಅಹಿಂಸೆಯನ್ನು ಅನುಸರಿಸುತ್ತಿದ್ದವನು. ಮನುಷ್ಯರಲ್ಲಿ ಮಾತ್ರವಲ್ಲ ಪ್ರಾಣಿಗಳಲ್ಲೂ ಕರುಣೆ ತೋರುತ್ತಿದ್ದ ಸಹೃದಯಿ. ಹುಟ್ಟು, ಸಾವು, ರೋಗರುಜ್ಜಿನಗಳು, ಮಾನಸಿಕಕ್ಲೇಷ, ಶೋಷಣೆ ಮತ್ತು ಜಾತಿ ಅಸಮಾನತೆಯಿಂದ ಬೆಂದಿದ್ದ ಅಪಾರ ಜನರನ್ನು ಕಂಡು ಸಿದ್ಧಾರ್ಥ ಸದಾ ಮರುಕಪಡುತ್ತಿದ್ದನು. ಜನರನ್ನು ಈ ಮಹಾ ಸಂಕಟದಿಂದ ಹೇಗೆ ಪಾರುಮಾಡುವುದು ಎಂಬುದು ಸಿದ್ಧಾರ್ಥನ ಚಿಂತನೆಯಾಗಿತ್ತು. ಇಂತಹ ಆಲೋಚನೆ ಅವನಲ್ಲಿ ದಿನದಿಂದ ದಿನಕ್ಕೆ ಬೆಳೆಯುತ್ತಾ ಹೋದಂತೆ ಆತ ಸಂಸಾರ ತೊರೆದು ಅಂತಿಮ ಸತ್ಯ ಕಂಡುಕೊಳ್ಳಲು ದೃಢ ನಿರ್ಧಾರ ಮಾಡಿದ. ಒಂದು ರಾತ್ರಿ ತನ್ನ ಆಪ್ತ ಚೆನ್ನನ ಜೊತೆ ಅರಮನೆ ತೊರೆದು ಹೊರಟ. ಅದನ್ನು ಬೌದ್ಧಧರ್ಮದ ಇತಿಹಾಸದಲ್ಲಿ ಇದು 'ಮಹಾರಾತ್ರಿ' ಎಂದು ವರ್ಣಿತವಾಗಿದೆ. ಕಪಿಲವಸ್ತು ರಾಜ್ಯದ ಗಡಿ ದಾಟಿದ ಮೇಲೆ ತನ್ನ ರಾಜಕುಮಾರನ ಉಡುಗೆ ತೊಡುಗೆಗಳನ್ನು ಕಳಚಿ ಕಾಷಾಯವಸ್ತ್ರಧಾರಿಯಾದ.

ಮನುಷ್ಯನ ಬದುಕಿನಲ್ಲಿ ಬರುವ ಕಷ್ಟಗಳನ್ನು ಎದುರಿಸಲಿರುವ ಸರಳ ಮಾರ್ಗಗಳು ಯಾವುವು ಎಂಬುದು ಸಿದ್ಧಾರ್ಥನ ಪ್ರಶ್ನೆಯಾಗಿತ್ತು. ಅದಕ್ಕಾಗಿ ಅನೇಕ ತಪಸ್ವಿಗಳನ್ನು ಭೇಟಿಯಾದ. ಅನೇಕ ಪ್ರಾಚೀನ ಗ್ರಂಥಗಳನ್ನು



ಅಧ್ಯಯನ ಮಾಡಿದ. ಗಯಾ ಬಳಿ ಆರು ವರ್ಷಗಳ ಕಾಲ ಕಠಿಣ ತಪಸ್ಸು ಆಚರಿಸಿದ. ಆಗ ಐವರು ಬ್ರಾಹ್ಮಣವಟುಗಳು ಅವನ ಶಿಷ್ಯರಾದರು. ಆದರೆ ತಪಸ್ಸು ವೃಥಾ ದೇಹ ದಂಡನೆಯ ಕ್ರಿಯೆಯಾಯಿತೇ ಹೊರತು ಯಾವುದೇ ಪ್ರಯೋಜನ ದೊರೆಯಲಿಲ್ಲ. ಸಿದ್ಧಾರ್ಥ ತಪಸ್ಸನ್ನು ತೊರೆದ. ಅಗವನ ಬಳಿಯಿದ್ದ ಶಿಷ್ಯರು ಅವನನ್ನು ಬಿಟ್ಟು ಹೋದರು. ಆಗ ಸಿದ್ಧಾರ್ಥ ಏಕಾಂಗಿಯಾದ. ಆಲೋಚನಾಪರನಾಗಿ ಶಾಂತಚಿತ್ತದಿಂದ ಸಿದ್ಧಾರ್ಥ ಹಲವು ದಿನಗಳ ಕಾಲ ಉರವೇಲ ಕಾಡಿನಲ್ಲಿ ಸಂಚರಿಸುತ್ತಾನೆ. ನಿರಂಜನನದಿಯ ದಂಡೆಯ ಮೇಲೆ ಧ್ಯಾನಾಸಕ್ತನಾಗುತ್ತಾನೆ. ಮರುದಿನ ಸೂರ್ಯೋದಯದ ವೇಳೆಗೆ ಆತನಿಗೆ 'ಜ್ಞಾನೋದಯ'ವಾಗುತ್ತದೆ. ಅವನಿಗೆ ಪರಮ ಜ್ಞಾನ ಲಭಿಸುತ್ತದೆ. ಅಂದಿನಿಂದ ಅವನ ಹೆಸರು ಸಿದ್ಧಾರ್ಥ ಎನ್ನುವುದು ಬದಲಾಗಿ ಗೌತಮ ಬುದ್ಧ ಎಂಬುದಾಗುತ್ತದೆ. ಜ್ಞಾನೋದಯದ ಬಳಿಕ ಮೊದಲಿಗೆ ತನ್ನಲ್ಲಿ ಶಿಷ್ಯವೃತ್ತಿ ಕೈಗೊಂಡಿದ್ದ ಐವರು ಬ್ರಾಹ್ಮಣವಟುಗಳಿಗೆ ತಾನು ಕಂಡುಕೊಂಡಿದ್ದ ಸತ್ಯವನ್ನು ತಿಳಿಸಲು ಅವರನ್ನು ಹುಡುಕಿಕೊಂಡು ಹೋಗುತ್ತಾನೆ. ಅವರು ಸಾರನಾಥದ ಬಳಿಯಿರುತ್ತಾರೆ. ಭಗವಾನ್ ಬುದ್ಧ ತನ್ನ ಮೊದಲ ಉಪದೇಶವನ್ನು ಅವರಿಗೆ ನೀಡುತ್ತಾನೆ.

ಭಗವಾನ್ ಬುದ್ಧ ಅಲೌಕಿಕ ಜಗತ್ತಿಗೆ ಹೆಚ್ಚು ಮಹತ್ವ ಕೊಡಲಿಲ್ಲ. ಮನುಷ್ಯ ಇಹದಲ್ಲಿ ಹೇಗೆ ನೆಮ್ಮದಿಯಾಗಿ ಬದುಕಬಹುದು ಎಂಬುದಕ್ಕೆ ಆದ್ಯತೆ ನೀಡಿದ. ಭಗವಾನ್ ಬುದ್ಧ ನಿರಂತರವಾಗಿ 45 ವರ್ಷಗಳ ಕಾಲ ಧರ್ಮಪ್ರಚಾರ ಮಾಡಿದ್ದಾನೆ. ಅವನು ಬೋಧಿಸಿದ ಧರ್ಮವು ಬೌದ್ಧಧರ್ಮ ಎಂದು ಖ್ಯಾತವಾಯಿತು. ಭಗವಾನ್ ಬುದ್ಧ ವೇದಗಳನ್ನು ಪ್ರಮಾಣ ಎಂದು ಸ್ವೀಕರಿಸಲಿಲ್ಲ. ಧರ್ಮದ ಹೆಸರಿನಲ್ಲಿ ನಡೆಯುತ್ತಿದ್ದ ಯಜ್ಞ, ಯಾಗ, ಪಶುಬಲಿ ಹಾಗೂ ಕಂದಾಚಾರಗಳನ್ನು ಆತ ಖಂಡಿಸಿದ. ಜೀವನ ಕ್ಷಣಿಕ ಮತ್ತು ದುಃಖಮಯ, ಇಂತಹ ದುಃಖಕ್ಕೆ ಮುಖ್ಯಕಾರಣ ಮನುಷ್ಯರಲ್ಲಿರುವ ದುರಾಸೆ, ಅದನ್ನು ದಮನ ಮಾಡಿದರೆ ನಿರ್ವಾಣ ಹೊಂದಬಹುದು ಎನ್ನುವ ರಹಸ್ಯವನ್ನು ಆತ ಎಲ್ಲರಿಗೂ ಹೇಳಿದ. ಸತ್ಯ, ಅಹಿಂಸೆ, ಶಾಂತಿ ಮತ್ತು ಧ್ಯಾನಕ್ಕೆ ಬುದ್ಧ ಮಹತ್ವದ ಸ್ಥಾನ ಕೊಟ್ಟ. ಮಾನವಸೇವೆ ದೊಡ್ಡದು ಎಂಬುದು ಆತನ ಅಭಿಪ್ರಾಯ. ಜಾತಿಪದ್ಧತಿಯನ್ನು ಖಂಡಿಸಿದ. ಮಹಿಳೆಗೆ ಸಮಾನ ಅಧಿಕಾರ ಕೊಟ್ಟ ಮೊದಲ ವ್ಯಕ್ತಿ ಭಗವಾನ್ ಬುದ್ಧ. ಅವನ ಧರ್ಮದಲ್ಲಿ ಉಚ್ಚ–ನೀಚ, ಬಡವ–ಬಲ್ಲಿದ, ರಾಜ–ಸೇವಕ ಎಂಬ ಭೇದವಿರಲಿಲ್ಲ. ಅಂದು ಸಂಸ್ಕೃತವು ಪಂಡಿತ ಮತ್ತು ಮೇಲ್ವರ್ಗದ ಭಾಷೆಯಾಗಿತ್ತು. ಭಗವಾನ್ ಬುದ್ಧ ಜನರ ಭಾಷೆಯಾದ ಪಾಳಿಯಲ್ಲಿ ತನ್ನ ಉಪದೇಶಗಳನ್ನು ನೀಡಿದ. ಶಾಂತಿ, ದಯೆ, ಭ್ರಾತೃತ್ವ ಮತ್ತು ಪ್ರೇಮದ ಸಾಕಾರಮೂರ್ತಿ ಭಗವಾನ್ ಬುದ್ಧ ಎಂಬುದು ಎಲ್ಲ ವಿದ್ವಾಂಸರ ಅಭಿಪ್ರಾಯ.

ಸಾಮಾನ್ಯರು ಅನುಸರಿಸಲು ಯೋಗ್ಯವಾದ ಅಷ್ಟಾಂಗಮಾರ್ಗಗಳನ್ನು ಭಗವಾನ್ ಬುದ್ಧ ಬೋಧಿಸಿದ. ಅವುಗಳೆಂದರೆ ಸದಾಚಾರ, ಸತ್‌ನಂಬಿಕೆ, ಸನ್ನುಡಿ, ಸನ್ನಡತೆ, ಸಜ್ಜೀವನ, ಸತ್ಪ್ರಯತ್ನ, ಸದ್ಭಾವನೆ ಮತ್ತು ಸತ್ಪ್ರಾರ್ಥನೆ. ಭಗವಾನ್ ಬುದ್ಧ ಮಾನವಸೇವೆ ದೊಡ್ಡದು ಎಂದೇ ಭಾವಿಸಿದ್ದನು. ಆತ ಸ್ವತಃ ಕುಷ್ಠರೋಗಿಗಳಿಗೆ ಚಿಕಿತ್ಸೆ ಮಾಡಿದ್ದನು. ಎಲ್ಲ ಬೌದ್ಧಸಂನ್ಯಾಸಿಗಳು ಸೇವಾಮನೋಭಾವವನ್ನು ಬೆಳೆಸಿಕೊಂಡಿದ್ದರು. ಬೌದ್ಧಧರ್ಮ ಜಗತ್ತಿನಲ್ಲಿ ವಿಚಾರಕ್ರಾಂತಿಗೆ ಅನುವು ಮಾಡಿಕೊಟ್ಟಿತು. ಭಗವಾನ್ ಬುದ್ಧ ತನ್ನ ಕಾಲಕ್ಕಿಂತಲೂ ಮುಂದುವರಿದು ಚಿಂತಿಸಿದ್ದ. ಆಧುನಿಕ ಕಾಲದಲ್ಲೂ ಭಗವಾನ್ ಬುದ್ಧನ ಜೀವಕಾರುಣ್ಯದ ಬೋಧನೆಗೆ ಮನಸೋತವರು ಸಂವಿಧಾನಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್. ತಮ್ಮ ಸಾವಿರಾರು ಅನುಯಾಯಿಗಳ ಜೊತೆ ಅವರು ಬೌದ್ಧಧರ್ಮಕ್ಕೆ ಮತಾಂತರಗೊಂಡರು. ಆ ಧರ್ಮವೊಂದರಲ್ಲಿ ಮಾತ್ರ ಸಮಾನತೆ ಕಾಣಬಹುದು ಎಂದು ಡಾ.ಅಂಬೇಡ್ಕರ್ ನಂಬಿದ್ದರು. ಕೆಲವು ಐತಿಹಾಸಿಕ ಕಾರಣಗಳಿಂದಾಗಿ ಭಾರತದಲ್ಲಿ ಬೌದ್ಧಧರ್ಮ ಅದೃಶ್ಯವಾಯಿತು. ಆದರೆ ಚೀನಾ, ಶ್ರೀಲಂಕಾ, ಜಪಾನ್, ಟಿಬೆಟ್ಟು, ಸಿರಿಯಾ ಮೊದಲಾದ ದೇಶಗಳಲ್ಲಿ ಇಂದಿಗೂ ಬೌದ್ಧಧರ್ಮ ತನ್ನ ಮಹತ್ವವನ್ನು ಉಳಿಸಿಕೊಂಡಿದೆ. ಭಗವಾನ್ ಬುದ್ಧ ಮತ್ತು ಬೌದ್ಧಧರ್ಮ ಜಗತ್ತಿನ ಅನೇಕ ಧರ್ಮ ಮತ್ತು ಚಿಂತನೆಗಳಿಗೆ ಪ್ರೇರಣೆ ನೀಡಿರುವುದನ್ನು ಮರೆಯುವಂತಿಲ್ಲ.

■ ನಿರೂಪಣೆ: ಎನ್.ಭಾರತಿ

## ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯದ ಆಶ್ರಯದಲ್ಲಿ ರ್‍ಯಾಂಕ್ ಪಡೆದ ಶ್ರೀದೇವಿ ವೈದ್ಯಕೀಯ ಕಾಲೇಜಿನ ವಿದ್ಯಾರ್ಥಿಗಳು

ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಆಸ್ಪತ್ರೆಯ ವಿದ್ಯಾರ್ಥಿಗಳು ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯದ ಅಡಿಯಲ್ಲಿ 2022–23ನೇ ಸಾಲಿನಲ್ಲಿ ನಡೆದ ಪರೀಕ್ಷೆಗಳಲ್ಲಿ ವಿವಿಧ ವಿಷಯಗಳಲ್ಲಿ ರ್‍ಯಾಂಕ್‌ಗಳನ್ನು ಪಡೆದಿರುತ್ತಾರೆ. ಸುಮಾರು 12ಕ್ಕೂ ಹೆಚ್ಚು ವಿಭಾಗಗಳಲ್ಲಿ ರ್‍ಯಾಂಕ್‌ನ್ನು ಪಡೆದು ಕಾಲೇಜಿಗೆ ಕೀರ್ತಿಯನ್ನು ತಂದಿರುತ್ತಾರೆ. ಅದರ ವಿವರ. ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಆಸ್ಪತ್ರೆ ಇ.ಎನ್.ಟಿ ವಿಭಾಗದಿಂದ ರಾಕೇಶ್.ಎ 89.2% ಅಂಕ ಪಡೆದು ರಾಜ್ಯಕ್ಕೆ ಪ್ರಥಮ ರ್‍ಯಾಂಕ್‌ನ್ನು ಪಡೆದಿದ್ದಾರೆ. ಇದೇ ವಿಭಾಗದಿಂದ ದೀಪು ಎಸ್.ಎ 86.8% ಅಂಕ ಪಡೆದು ತೃತೀಯ ರ್‍ಯಾಂಕ್ ಪಡೆದಿರುತ್ತಾರೆ, ನವ್ಯಜಿ. 85.2% ಅಂಕ ಪಡೆದು ಏಳನೇ ರ್‍ಯಾಂಕ್ ಪಡೆದಿರುತ್ತಾರೆ. ಪ್ರೇರಣಾ 84.4% ಅಂಕ ಪಡೆದು 9ನೇ ರ್‍ಯಾಂಕ್ ಪಡೆದಿರುತ್ತಾರೆ, ಮೇಹಕ್ ಶರ್ಮ 84% ಅಂಕ ಪಡೆದು 9 ನೇ ರ್‍ಯಾಂಕ್ ಪಡೆದಿರುತ್ತಾರೆ.

ಅಂಗರಚನಾ ಶಾಸ್ತ್ರ ವಿಭಾಗದಲ್ಲಿ ದೀಪು ಎಸ್.ಎ 82.% ಅಂಕ ಪಡೆದು 9ನೇ ರ್‍ಯಾಂಕ್ ಪಡೆದಿರುತ್ತಾರೆ ಹಾಗೂ ವಂದನಾ. ಎನ್ 82.% ಅಂಕ ಪಡೆದು 9ನೇ ರ್‍ಯಾಂಕ್ ಪಡೆದಿರುತ್ತಾರೆ. ಸೂಕ್ಷ್ಮ ಜೀವಾಣುಶಾಸ್ತ್ರ ವಿಭಾಗದಿಂದ ವಂದನಾ. ಎನ್ 79.25% ಅಂಕ ಪಡೆದು 9ನೇ ರ್‍ಯಾಂಕ್ ಪಡೆದಿರುತ್ತಾರೆ. ಮನೀಶಿಕ್ 79.25% ಅಂಕ ಪಡೆದು 9ನೇ ರ್‍ಯಾಂಕ್ ಪಡೆದಿರುತ್ತಾರೆ. ಮಕ್ಕಳ ವೈದ್ಯಕೀಯ ಶಾಸ್ತ್ರ ವಿಭಾಗದಿಂದ ಮೇಹಕ್ ಶರ್ಮ 79.2% ಅಂಕ ಪಡೆದು 9ನೇ ರ್‍ಯಾಂಕ್ ಪಡೆದಿರುತ್ತಾರೆ. ಸಮುದಾಯ ಆರೋಗ್ಯ ವೈದ್ಯಶಾಸ್ತ್ರ ವಿಭಾಗದಿಂದ ಐಶ್ವರ್ಯ ಎಲ್. ಎನ್. 81.% ಅಂಕ ಪಡೆದು 5ನೇ ರ್‍ಯಾಂಕ್ ಪಡೆದಿರುತ್ತಾರೆ. ನ್ಯಾಯ ವಿಧಿ ವಿಜ್ಞಾನಶಾಸ್ತ್ರ ವಿಭಾಗದಿಂದ ಕೋಮಲ್ 82.% ಅಂಕ ಪಡೆದು 10ನೇ ರ್‍ಯಾಂಕ್ ಪಡೆದಿರುತ್ತಾರೆ.

ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಆಸ್ಪತ್ರೆಯ ಮೊದಲನೇ ವರ್ಷದ ಎಂ.ಬಿ.ಬಿ.ಎಸ್.ನಲ್ಲಿ 12 ವಿದ್ಯಾರ್ಥಿಗಳು ಅತ್ಯುತ್ತಮ ಶ್ರೇಣಿ, (ಡಿಸ್ಟಿಂಕ್ಷನ್), 64 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಹಾಗೂ 50 ವಿದ್ಯಾರ್ಥಿಗಳು ದ್ವಿತೀಯ ದರ್ಜೆಯಲ್ಲಿ ತೇರ್ಗಡೆ ಹೊಂದಿರುತ್ತಾರೆ. ಈ ಸಾಲಿನಲ್ಲಿ ಶೇ.89 ಫಲಿತಾಂಶ ಬಂದಿರುತ್ತದೆ. ಎರಡನೇ ವರ್ಷ ಎಂ.ಬಿ.ಬಿ.ಎಸ್.ನಲ್ಲಿ 12 ವಿದ್ಯಾರ್ಥಿಗಳು ಅತ್ಯುತ್ತಮ ಶ್ರೇಣಿ, (ಡಿಸ್ಟಿಂಕ್ಷನ್), 70 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಹಾಗೂ 29 ವಿದ್ಯಾರ್ಥಿಗಳು ದ್ವಿತೀಯ ದರ್ಜೆಯಲ್ಲಿ ತೇರ್ಗಡೆ ಹೊಂದಿರುತ್ತಾರೆ. ಈ ಸಲದ ಶೈಕ್ಷಣಿಕ ವರ್ಷದಲ್ಲಿ ಶೇ.73 ಫಲಿತಾಂಶ ಬಂದಿರುತ್ತದೆ. ಮೂರನೇ ವರ್ಷ ಎಂ.ಬಿ.ಬಿ.ಎಸ್.ನಲ್ಲಿ 8 ವಿದ್ಯಾರ್ಥಿಗಳು ಅತ್ಯುತ್ತಮ ಶ್ರೇಣಿ, (ಡಿಸ್ಟಿಂಕ್ಷನ್), 71 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಹಾಗೂ 20 ವಿದ್ಯಾರ್ಥಿಗಳು ದ್ವಿತೀಯದರ್ಜೆಯಲ್ಲಿ ತೇರ್ಗಡೆ ಹೊಂದಿರುತ್ತಾರೆ. ಒಟ್ಟಾರೆಯಾಗಿ ಶೇ.88 ಫಲಿತಾಂಶದಿಂದ ತೇರ್ಗಡೆಯಾಗಿರುತ್ತಾರೆ.

ಒಟ್ಟಾರೆ 32 ವಿದ್ಯಾರ್ಥಿಗಳು ಅತ್ಯುತ್ತಮ ಶ್ರೇಣಿಯಲ್ಲಿ (ಡಿಸ್ಟಿಂಕ್ಷನ್), 205 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ಹಾಗೂ 89 ವಿದ್ಯಾರ್ಥಿಗಳು ದ್ವಿತೀಯ ದರ್ಜೆಯಲ್ಲಿ ತೇರ್ಗಡೆ ಹೊಂದಿ ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯಕ್ಕೆ ರಾಜ್ಯ ಮಟ್ಟದಲ್ಲಿ ಕೀರ್ತಿ ತಂದಿದ್ದಾರೆ.

**ಪತ್ರಿಕೆಯ ಬಳಗ**

ಪ್ರಧಾನ ಸಂಪಾದಕರು
**ಡಾ. ಎಂ. ಆರ್. ಹುಲಿನಾಯ್ಕರ್**

ಗೌರವ ಸಂಪಾದಕರು
**ಡಾ. ಕೆ.ಆರ್.ಕಮಲೇಶ**

ಕಾರ್ಯನಿರ್ವಾಹಕ ಸಂಪಾದಕರು
**ಡಾ. ರಮಣ ಎಂ. ಹುಲಿನಾಯ್ಕರ್**

ಸಂಪಾದಕರು
**ಅಂಬಿಕಾ ಎಂ. ಹುಲಿನಾಯ್ಕರ್**

ಸಂಯೋಜಕ ಸಂಪಾದಕರು
**ಎಂ.ಎಸ್.ಪಾಟೀಲ್**

ಸಲಹಾ ಸಂಪಾದಕರು
**ಎನ್.ಭಾರತಿ**

ಸಂಪಾದಕ ಮಂಡಳಿ
**ಡಾ. ಭವಾನಿ ಸ್ವಾಲಿನ್**
**ಡಾ. ಮನೋಜ್ಞಣೆ ಎಂ.ಎಚ್**
**ಡಾ. ಲಾವಣ್ಯ ರಮಣ**

ಸಹಾಯಕ ಸಂಪಾದಕರು: **ಎನ್. ಆನಂದ** ಪುಟ ವಿನ್ಯಾಸ: **ಸುಮಾ ಸಾಗರ್**

# ಆರೋಗ್ಯ ಕ್ಷೇತ್ರದಲ್ಲಿ ಎನ್‌ಎಬಿಎಚ್‌ನ ಮಾನ್ಯತೆ ಎಂದರೇನು?

ಮನದ ಮಾತು



ಡಾ. ರಮಣ ಎಂ ಹುಲಿನಾಯ್ಕರ್
ಕಾರ್ಯನಿರ್ವಾಹಕ ಸಂಪಾದಕರು
ನಿರ್ದೇಶಕರು, ಶ್ರೀದೇವಿ ವೈದ್ಯಕೀಯ ಕಾಲೇಜು

### ಎನ್‌ಎಬಿಎಚ್ ಸಂಸ್ಥೆಯ ಜನನ

ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಕೇಂದ್ರದ ಆಸ್ಪತ್ರೆಗೆ NABH ಮಾನ್ಯತೆ ಪಡೆಯಲು ಕಳೆದ ಒಂದು ವರ್ಷದಿಂದ ಪ್ರಯತ್ನ ನಡೆಸಿದ್ದೇವೆ. ಅದಕ್ಕಾಗಿ ನಮ್ಮ ಸಂಸ್ಥೆಯ ಸಿಬ್ಬಂದಿ ವಿಶೇಷವಾದ ಪ್ರಯತ್ನವನ್ನು ಮಾಡಿದ್ದಾರೆ. ಇದಕ್ಕಾಗಿ ಸಿಬ್ಬಂದಿಗೆ ವಿಶೇಷವಾದ ತರಬೇತಿಯನ್ನು ನೀಡಲಾಯಿತು. ಎನ್‌ಎಬಿಎಚ್ ಮಾನ್ಯತೆ ಪಡೆಯಲು ನಿಗದಿ ಮಾಡಿರುವ ಮಾನದಂಡಗಳನ್ನು ಚಾಚೂ ತಪ್ಪದೇ ಪಾಲಿಸಿದ್ದೇವೆ.

2005ನೆಯ ಇಸವಿಯಲ್ಲಿ ಭಾರತ ಸರ್ಕಾರದ Board of Quality Council of India ಅಂಗಸಂಸ್ಥೆ National Accreditation Board for Hospital and Health Providers ಸಂಸ್ಥೆಯೊಂದನ್ನು ಸ್ಥಾಪಿಸಿತು. ಇದರ ಉದ್ದೇಶ, ಆರೋಗ್ಯವಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಆಸ್ಪತ್ರೆಗಳ ಗುಣಮಟ್ಟವನ್ನು ಅಂತಾರಾಷ್ಟ್ರೀಯ ಮಾನದಂಡಗಳಿಗನುಗುಣವಾಗಿ ಮೇಲ್ದರ್ಜೆಗೇರಿಸುವುದಾಗಿದೆ. ಇದರ ಫಲ ಆಸ್ಪತ್ರೆಗೆ ಬರುವ ರೋಗಿಗಳಿಗೆ ದೊರೆಯುತ್ತದೆ. ಆರೋಗ್ಯ ಕ್ಷೇತ್ರ ಸದೃಢವಾದರೆ ಅದರ ಪ್ರಯೋಜನ ಹತ್ತಾರು ಕ್ಷೇತ್ರಗಳಿಗೆ ದೊರೆಯುತ್ತದೆ.

ಆಸ್ಪತ್ರೆಗೆ ಬರುವ ಫಲಾನುಭವಿಗಳಿಗೆ ಉತ್ತಮ ಚಿಕಿತ್ಸೆ, ಸೇವಾತತ್ಪರತೆ, ರೋಗಿಯ ಸಂರಕ್ಷಣೆ, ಪಾರದರ್ಶಕ ನಡವಳಿಕೆ, ವೈದ್ಯರು ಮತ್ತು ಅರೆ ವೈದ್ಯಕೀಯ ಸಿಬ್ಬಂದಿಯ ವೃತ್ತಿಪರತೆ, ಪ್ರಯೋಗಾಲಯದ ಫಲಿತಾಂಶದಲ್ಲಿ ನಿಖರತೆ, ವೈದ್ಯಕೀಯ ಶಿಷ್ಟಾಚಾರದ ಪರಿಪಾಲನೆ, ವಿಶೇಷ ಚೇತನರಿಗೆ ಸೌಲಭ್ಯ ಮತ್ತು ವೈದ್ಯಕೀಯ ತುರ್ತು ಸಂದರ್ಭದಲ್ಲಿ ಸಿಬ್ಬಂದಿಯ ಕಾರ್ಯದಕ್ಷತೆ ಮೊದಲಾದ ಅಂಶಗಳನ್ನು ಎನ್‌ಎಬಿಎಚ್ ತನ್ನ ಪರಿಶೀಲನೆಯ ಕಾಲದಲ್ಲಿ ಗಮನಿಸುತ್ತದೆ.

### ಮಾನ್ಯತೆಯಿಂದ ಯಾರಿಗೆ ಲಾಭ?

ಆಸ್ಪತ್ರೆಗಳು ಎನ್‌ಎಬಿಎಚ್‌ನ ಮಾನ್ಯತೆ ಪಡೆಯುವುದರಿಂದ ಯಾರಿಗೆ ಹೆಚ್ಚು ಲಾಭವಾಗುತ್ತದೆ ಎನ್ನುವ ಅಂಶ ಪರಿಶೀಲನೆಗೆ ಅರ್ಹವಾಗಿದೆ. ಎನ್‌ಎಬಿಎಚ್‌ನ ಮಾನ್ಯತೆ ಪಡೆದ ಆಸ್ಪತ್ರೆಯಿಂದ ಹೆಚ್ಚು ಲಾಭ ಪಡೆಯುವವರು ರೋಗಿಗಳೆಂದರೆ ತಪ್ಪಿಲ್ಲ. ಈ ಮಾನ್ಯತೆ ಮುಖ್ಯ ಉದ್ದೇಶವೇ ರೋಗಿಗಳಿಗೆ ಸುರಕ್ಷತೆ ಮತ್ತು ಗುಣಮಟ್ಟದ ಸೇವೆ ನೀಡುವುದಾಗಿರುತ್ತದೆ. ರೋಗಿಗೆ ಚಿಕಿತ್ಸೆ ನೀಡುವವರು ಮತ್ತು ಶುಶ್ರೂಷೆ ಮಾಡುವವರು ಮಾನ್ಯತೆ ಪಡೆದ ಸಂಸ್ಥೆಗಳಿಂದ ಶೈಕ್ಷಣಿಕ ಅರ್ಹತೆ ಪಡೆದಿರುತ್ತಾರೆ. ರೋಗಿಗಳು ಸಹಜವಾಗಿ ಪಡೆಯುವ ಹಕ್ಕುಗಳನ್ನು ನಿರಾಕರಿಸುವಂತಿಲ್ಲ. ಅವರಿಗೆ ಸಂತೃಪ್ತಿದಾಯಕ ಸೇವೆ ಒದಗಿಸಬೇಕು. ಕಾಲದಿಂದ ಕಾಲಕ್ಕೆ ಅದರ ಮೌಲ್ಯಮಾಪನ ಸಹ ಮಾಡಲಾಗುತ್ತದೆ.

### ಆಸ್ಪತ್ರೆಯ ಬೆಳವಣಿಗೆಗೆ ಪೂರಕ

ಎನ್‌ಎಬಿಎಚ್‌ನ ಮಾನ್ಯತೆಯಿಂದ ಶ್ರೀದೇವಿ ವೈದ್ಯಕೀಯ ಕಾಲೇಜಿನ ಘನತೆ ಹೆಚ್ಚುತ್ತದೆ. ಒಮ್ಮೆ ಮಾನ್ಯತೆ ಪಡೆದ ಆಸ್ಪತ್ರೆ ತನ್ನ ಸೇವೆಯ ಗುಣಮಟ್ಟವನ್ನು ನಿರಂತರವಾಗಿ ಕಾಪಾಡಿಕೊಳ್ಳುತ್ತದೆ. ಅದನ್ನು ಮತ್ತಷ್ಟು ಸುಧಾರಿಸಲು ಪ್ರಯತ್ನ ನಡೆಸುತ್ತಿರುತ್ತದೆ.

ಆಸ್ಪತ್ರೆಯ ಆಡಳಿತ ನಿರ್ವಹಣೆಯಲ್ಲಿ ಇಂತಹ ಮಾನ್ಯತೆ ಸಹಾಯ ಮಾಡುತ್ತದೆ. ಗುಣಮಟ್ಟದ ಸೇವೆಯ ವಿಚಾರದಲ್ಲಿ ಸಿಬ್ಬಂದಿಗೆ ಜಾಗೃತಿಯಿರುವ ಕಾರಣ ನಿರಂತರವಾಗಿ ಎಚ್ಚರಪ್ರಜ್ಞೆಯಿಂದ ಕೆಲಸ ನಿರ್ವಹಿಸಬೇಕಾಗುತ್ತದೆ. ಉತ್ತಮ ಸೇವೆ ಆಸ್ಪತ್ರೆಯಲ್ಲಿ ದೊರೆತಾಗ ರೋಗಿಗಳು ಸಹಜವಾಗಿ




ಸಂತೋಷಗೊಳ್ಳುತ್ತಾರೆ. ಮಾನ್ಯತೆಯಿಂದಾಗಿ ಸೇವೆ ಮಾಡುವವರಲ್ಲೂ ಮತ್ತು ಸೇವೆ ಪಡೆಯುವವರಲ್ಲೂ ಆತ್ಮವಿಶ್ವಾಸ ಹೆಚ್ಚುವಂತೆ ಮಾಡುತ್ತದೆ. ಇಂತಹ ಮಾನ್ಯತೆ ಆಸ್ಪತ್ರೆಗೆ ಉತ್ತಮ ಹೆಸರನ್ನು ಸಮಾಜದಲ್ಲಿ ತಂದುಕೊಡುತ್ತದೆ. ಜನರು ಆಸ್ಪತ್ರೆಯ ಬಗೆಗೆ ಸದಭಿಪ್ರಾಯ ಬೆಳಸಿಕೊಳ್ಳುತ್ತಾರೆ. ಒಮ್ಮೆ ಆಸ್ಪತ್ರೆ ವಿಚಾರದಲ್ಲಿ ಸದಭಿಪ್ರಾಯ ಮೂಡಿದರೆ ಅದರ 'ಗುಡ್‌ವಿಲ್' ಅನೇಕ ರೀತಿ ಪ್ರಯೋಜನಕ್ಕೆ ಬರುತ್ತದೆ. ಆಸ್ಪತ್ರೆಯ ಸಬಲೀಕರಣಕ್ಕೆ ಇದರ ಪ್ರಯೋಜನ ದೊರೆಯುತ್ತದೆ.

### ವಿವಿಧ ರೀತಿಯ ಅಭಿವೃದ್ಧಿ

ಎನ್‌ಎಬಿಎಚ್‌ನ ಮಾನ್ಯತೆಯಿಂದ ವಿದೇಶದಲ್ಲಿನ ರೋಗಿಗಳು ಆಸ್ಪತ್ರೆಗೆ ಬಂದು ಚಿಕಿತ್ಸೆ ಪಡೆಯಬಹುದು. ಇದರಿಂದ 'ಆರೋಗ್ಯ ಪ್ರವಾಸೋದ್ಯಮ' (Medical Tourism) ಗರಿಗೆದರಬಹುದು. ಅಂತಾರಾಷ್ಟ್ರೀಯ ಮಾನದಂಡಗಳಿಗನುಗುಣವಾಗಿ ವೈದ್ಯಕೀಯ ಸೇವೆ ದೊರೆಯುವ ಕಾರಣ ವೈದ್ಯಕೀಯ ಪ್ರವಾಸೋದ್ಯಮಕ್ಕೆ ಎಲ್ಲ ರೀತಿಯ ಅವಕಾಶಗಳಿರುತ್ತವೆ.

ಇಂದಿನ ಆರೋಗ್ಯವಲಯದಲ್ಲಿ 'ಆರೋಗ್ಯ ವಿಮೆ' (Health Insurance) ಹೆಚ್ಚಿನ ಮಹತ್ವ ಪಡೆಯುತ್ತಿದೆ. ಎನ್‌ಎಬಿಎಚ್‌ನ ಮಾನ್ಯತೆ ಪಡೆದ ಆಸ್ಪತ್ರೆಗಳು ಆರೋಗ್ಯ ವಿಮೆಯ ಸೌಲಭ್ಯವನ್ನು ಪಡೆದುಕೊಳ್ಳಬಹುದು. ಇದರಿಂದ ಆಸ್ಪತ್ರೆಗಳ ಬೆಳವಣಿಗೆಗೆ ತುಂಬ ಸಹಾಯವಾಗುತ್ತದೆ.

### ಸಿಬ್ಬಂದಿಗೆ ಪ್ರೇರಣೆ

ಈ ಮಾನ್ಯತೆಯು ಆಸ್ಪತ್ರೆ ಸಿಬ್ಬಂದಿಗೆ ತಮ್ಮ ಕಾರ್ಯನಿರ್ವಹಣೆಗೆ ಪ್ರೇರಣೆ ನೀಡುತ್ತದೆ. ಸಿಬ್ಬಂದಿಗಳು ನಿರಂತರವಾಗಿ ಕಲಿಕೆ, ಉತ್ತಮ ರೀತಿಯಲ್ಲಿ ಕರ್ತವ್ಯ ನಿರ್ವಹಣೆ, ಆಸ್ಪತ್ರೆಯಲ್ಲಿ ಸ್ಫೂರ್ತಿದಾಯಕ ವಾತಾವರಣದ ನಿರ್ಮಾಣ ಮತ್ತು ಅವರಲ್ಲಿ ನಾಯಕತ್ವದ ಗುಣ ಬೆಳೆಯಲು ಈ ಮಾನ್ಯತೆ ಸಹಾಯ ಮಾಡುತ್ತದೆ. ಸಿಬ್ಬಂದಿಯಲ್ಲಿ ದಕ್ಷತೆ ಮತ್ತು ಬದ್ಧತೆಗೆ ಆದ್ಯತೆ ನೀಡಲಾಗುತ್ತದೆ. ಅದೇ ರೀತಿ ವೈದ್ಯಕೀಯ ಮತ್ತು ಅರೆ ವೈದ್ಯಕೀಯ ಸಿಬ್ಬಂದಿಯನ್ನು ಉತ್ತರದಾಯಿತ್ವವನ್ನಾಗಿ ಮಾಡುತ್ತದೆ. ಆಸ್ಪತ್ರೆಯಲ್ಲಿ ಚೇತೋಹಾರಿ ವಾತಾವರಣವನ್ನು ಕಾಣಬಹುದು.

ಆಡಳಿತ ನಿರ್ವಹಣೆಯಲ್ಲಿ ಇಂತಹ ಮಾನ್ಯತೆಯೂ ಆರ್ಥಿಕವಾಗಿ ಆಸ್ಪತ್ರೆಯನ್ನು ಸದೃಢಗೊಳಿಸುತ್ತದೆ. ಆಸ್ಪತ್ರೆಯಲ್ಲಿ ನಿರಂತರವಾಗಿ ಬೆಳವಣಿಗೆ ಕಾಣಬಹುದು. ಹೊಸ ಹೊಸ ವೈದ್ಯಕೀಯ ಉಪಕರಣಗಳು ಆಸ್ಪತ್ರೆಗೆ ಸೇರ್ಪಡೆಯಾಗಬಹುದು. ಪ್ರಯೋಗಾಲಯದಲ್ಲಿ ಮತ್ತಷ್ಟು ಆಧುನಿಕತೆ ಕಾಣಬಹುದು. ಜೊತೆಗೆ ಆಸ್ಪತ್ರೆ ನಿರ್ವಹಣೆಯಲ್ಲಿ 'ಆರ್ಥಿಕಶಿಸ್ತು' ಕಾಣಬರುತ್ತದೆ. ಆಸ್ಪತ್ರೆಯಲ್ಲಿ ಮೂಲಭೂತಸೌಕರ್ಯದ ವೃದ್ಧಿಗೆ ಹೆಚ್ಚಿನ ಅವಕಾಶ ದೊರೆಯುತ್ತದೆ.

ಒಟ್ಟಾರೆ ಎನ್‌ಎಬಿಎಚ್‌ನ ಮಾನ್ಯತೆಯು ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯದ ಆಸ್ಪತ್ರೆಯ ಸರ್ವತೋಮುಖ ಬೆಳವಣಿಗೆಗೆ ಸಹಾಯವಾಗುತ್ತದೆ ಎಂದು ಆಶಿಸಬಹುದು.

▪ ಕನ್ನಡಕ್ಕೆ: ಎನ್.ಭಾರತಿ

# ಶ್ರೀದೇವಿ ಪದವಿ ಕಾಲೇಜಿನ ಬಿ.ಸಿ.ಎ, ಬಿ.ಕಾಂ. ವಿದ್ಯಾರ್ಥಿಗಳ ಸಾಧನೆ

## ವಿವಿಧ ಕಂಪನಿಗಳಿಂದ ಉದ್ಯೋಗಕ್ಕಾಗಿ ಪ್ರತಿಭಾವಂತರ ಆಯ್ಕೆ

"ಸ್ಪರ್ಧಾತ್ಮಕ ಜಗತ್ತಿನಲ್ಲಿ ಪದವೀಧರರು ವಿಶ್ವದಾದ್ಯಂತ ಲಭ್ಯವಿರುವ ಉದ್ಯೋಗಾವಕಾಶಗಳನ್ನು ತಮ್ಮದಾಗಿಸಿಕೊಳ್ಳಲು ಸಮರ್ಥರಾಗಿರಬೇಕು. ವಿದ್ಯಾರ್ಥಿಗಳಿಗೆ ಸಾಧನೆಯೇ ಯಶಸ್ಸಿನ ಕೀಲಿಕೈ. ಸೋಮಾರಿಗಳಿಗೆ ಸಾಧನೆಯೂ ಇಲ್ಲ, ಬದುಕೂ ಇಲ್ಲ. ಪ್ರತಿಯೊಬ್ಬ ವಿದ್ಯಾರ್ಥಿಯೂ ಜೀವನದಲ್ಲಿ ಗುರಿ ಮುಟ್ಟುವುದರ ಕಡೆ ಗಮನ ಕೊಡಬೇಕು. ಯಾವುದೇ ಹುದ್ದೆಗೆ ಆಯ್ಕೆಯಾಗಬೇಕಾದರೆ ವಿದ್ಯಾರ್ಥಿಗಳಲ್ಲಿ ಕೌಶಲ್ಯ ಮತ್ತು ಪ್ರತಿಭೆಯಿರಬೇಕು. ಅದನ್ನು ಉಪಯೋಗಿಸಿಕೊಳ್ಳುವ ಜಾಣ್ಮೆ ಕರಗತವಾಗಿರಬೇಕು. ಈ ಉದ್ದೇಶದಿಂದ ಸಂದರ್ಶನವನ್ನು ಎದುರಿಸಲು ಅಗತ್ಯವಾದ ಸಲಹೆ, ಕಾರ್ಪೋರೇಟ್ ವಲಯದಲ್ಲಿನ ಉದ್ಯೋಗ ಮತ್ತು ಸ್ವಉದ್ಯೋಗ ಮೊದಲಾದ ವಿಷಯಗಳನ್ನು ಕುರಿತು ಅಂತಿಮ ವರ್ಷದ ಪದವಿ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಉಪಯುಕ್ತ ಮಾಹಿತಿಯನ್ನು ಶ್ರೀದೇವಿ ಶಿಕ್ಷಣ ಸಂಸ್ಥೆ ಸದಾ ಕಾಲ ಒದಗಿಸುತ್ತಿದೆ" ಎಂದು ಶ್ರೀದೇವಿ ಸಂಸ್ಥೆಯ ಮಾನವ ಸಂಪನ್ಮೂಲ ವಿಭಾಗದ ನಿರ್ದೇಶಕರಾದ ಎಂ.ಎಸ್.ಪಾಟೀಲ್ ಅವರು ಶ್ರೀದೇವಿ ಪದವಿ ಮತ್ತು ಸ್ನಾತಕೋತ್ತರ ಕೇಂದ್ರದ ವತಿಯಿಂದ ಉದ್ಯೋಗಕ್ಕೆ ಆಯ್ಕೆಯಾದ ಸಂದರ್ಭದಲ್ಲಿ ತಿಳಿಸಿದರು. ಆಯ್ಕೆಯಾದ ವಿದ್ಯಾರ್ಥಿಗಳಿಗೆ ಉದ್ಯೋಗ ಪತ್ರ



ನೀಡುವ ಸಮಾರಂಭವನ್ನು ಮೇ 13ರಂದು ಹಮ್ಮಿಕೊಳ್ಳಲಾಗಿತ್ತು.

ಇದೇ ಸಂದರ್ಭದಲ್ಲಿ ಶ್ರೀದೇವಿ ಪದವಿ ಮತ್ತು ಸ್ನಾತಕೋತ್ತರ ಕೇಂದ್ರದ ಪ್ರಾಂಶುಪಾಲರಾದ ಮುಭಾರಕ್ ಅವರು "ನಮ್ಮ ಕಾಲೇಜಿನಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣವನ್ನು ನೀಡುವುದರ ಜೊತೆಗೆ ವಿದ್ಯಾರ್ಥಿಗಳಿಗೆ ಮಹತ್ವದ ಸಾಧನೆಗೆ ಪ್ರೋತ್ಸಾಹ ಹಾಗೂ ಬೆಂಬಲ ಕೊಡಲಾಗುತ್ತಿದೆ. ಇಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳು ದೇಶ–ವಿದೇಶಗಳ ಪ್ರತಿಷ್ಠಿತ ಕಂಪನಿಗಳಲ್ಲಿ ಉತ್ತಮ ಉದ್ಯೋಗ ದೊರಕಿಸಿ ಕೊಡುವುದು ಸಂಸ್ಥೆಯ ಮುಖ್ಯ ಗುರಿಯಾಗಿದೆ" ಎಂದರು.

ದೇಶದ ಪ್ರತಿಷ್ಠಿತ ಕಂಪನಿಗಳಾದ Microsoft, TCS, Infosys, Wipro, Accenture, Cognizant, Cap Gemini, IBM, HCL, HP, Bosch, ABB Limited, Tech Mahindra, BMW, Toyota Kirloskar, TMEiC, SAP Labs, Oracle, Lowe's, TAFE NTT DATA, Quest Global, Quinnox, SASKEN, SLK Software, SCIT, Accord Software and Systems, Continental Corporation, Ernst & Young, Society Generale, VIVO, MIND TREE, Synopsis, VIRTUSA, Huawai Technologies, L&T, L&T Technology Services, ITC Infotech, VIT Infotech, EPAM Systems, Geometric, Speridian Technologies, Unisys, TVS & Sons, MPHASIS, Ion Idea, PEOL Technologies ಮುಂತಾದ ಕಂಪನಿಗಳಲ್ಲಿ ಈ ಕಾಲೇಜಿನ ವಿದ್ಯಾರ್ಥಿಗಳು ಉದ್ಯೋಗ ಗಳಿಸಿಕೊಂಡಿದ್ದಾರೆ. ಪ್ರತಿ ವರ್ಷ ಸುಮಾರು 20ಕ್ಕೂ ಹೆಚ್ಚು ಕಂಪನಿಗಳು ಕಾಲೇಜಿಗೆ ಭೇಟಿ ನೀಡಿ ಕ್ಯಾಂಪಸ್ ಸಂದರ್ಶನವನ್ನು ನಡೆಸುತ್ತಿವೆ.

ಶ್ರೀದೇವಿ ಪದವಿ ಕಾಲೇಜಿನ ವಿದ್ಯಾರ್ಥಿಗಳಾದ ಅಭಿಷೇಕ್ ವಿದ್ಯಾರ್ಥಿ ಕಂಪನಿಯಾದ Focus Edumatics ನಲ್ಲಿ ವಾರ್ಷಿಕವಾಗಿ 3.5 ಲಕ್ಷ, ವಿದ್ಯಾಶ್ರೀ Brilio ನಲ್ಲಿ ವಾರ್ಷಿಕವಾಗಿ 6.0 ಲಕ್ಷ, ತೇಜಸ್.ಪಿ Focus Edumatic ನಲ್ಲಿ ವಾರ್ಷಿಕವಾಗಿ 2.5 ಲಕ್ಷ, ಹೀನಾ ತಾಜ್ SBI Cap Securites ನಲ್ಲಿ ವಾರ್ಷಿಕವಾಗಿ 2.5 ಲಕ್ಷ, ಸೂರ್ಯ ಪ್ರಕಾಶ್ Anil co-auditor ವಾರ್ಷಿಕವಾಗಿ 2.5 ಲಕ್ಷ, ಸ್ಫೂರ್ತಿ Consequences Copies Pvt Ltd ನಲ್ಲಿ ವಾರ್ಷಿಕವಾಗಿ 6 ಲಕ್ಷ, ಮತ್ತು ಕುಸುಮ Picarro ನಲ್ಲಿ ವಾರ್ಷಿಕವಾಗಿ 10 ಲಕ್ಷದವರೆಗೆ ವೇತನ ಪಡೆಯುತ್ತಾರೆ.

ಉದ್ಯೋಗಕ್ಕೆ ಆಯ್ಕೆಯಾದ ವಿದ್ಯಾರ್ಥಿಗಳಾದ ಶ್ರೀದೇವಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಡಾ.ಎಂ.ಆರ್.ಹುಲಿನಾಯ್ಕರ್, ವೈದ್ಯಕೀಯ ನಿರ್ದೇಶಕರಾದ ಡಾ.ರಮಣ್ ಎಂ. ಹುಲಿನಾಯ್ಕರ್, ಟ್ರಸ್ಟಿಯಾದ ಅಂಬಿಕಾ ಎಂ ಹುಲಿನಾಯ್ಕರ್, ಆಡಳಿತಾಧಿಕಾರಿಯಾದ ಟಿ.ವಿ.ಬ್ರಹ್ಮದೇವಯ್ಯ ಅವರು ಅಭಿನಂದಿಸಿದರು.

▪ ವರದಿ: ಎನ್.ಆನಂದ

# ತುಮಕೂರು ಜಿಲ್ಲೆಯಲ್ಲಿ ಎನ್‌ಎಬಿಎಚ್ ಮಾನ್ಯತೆ ಪಡೆದ ಮೊದಲ ವೈದ್ಯಕೀಯ ಆಸ್ಪತ್ರೆ




**ಅಂತಾರಾಷ್ಟ್ರೀಯ ಮಾನದಂಡಗಳಿಗೆ ಅನುಗುಣವಾಗಿ ರೋಗಿಗೆ ಸುರಕ್ಷತೆ ಮತ್ತು ಸೇವೆಯನ್ನು ಕಲ್ಪಿಸಿದ ಹಿನ್ನೆಲೆಯಲ್ಲಿ ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯದ ಆಸ್ಪತ್ರೆಗೆ National Accreditation Board for Hospitals and Healthcare Providers ನಿಂದ ಮಾನ್ಯತೆ ದೊರಕಿದ ಸಂದರ್ಭ.**

ದಶಮಾನೋತ್ಸವದ ಸಂಭ್ರಮದಲ್ಲಿರುವ ಶ್ರೀದೇವಿ ವೈದ್ಯಕೀಯ ಕಾಲೇಜಿಗೆ ರಾಷ್ಟ್ರಮಟ್ಟದಲ್ಲಿ ಗೌರವಸ್ಥಾನ. ಕಳೆದ ಎರಡು ವರ್ಷದಿಂದ ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಆಸ್ಪತ್ರೆಯಲ್ಲಿ ಸುರಕ್ಷತೆ ಮತ್ತು ಗುಣಮಟ್ಟದ ಚಿಕಿತ್ಸೆ ಹಾಗೂ ಉನ್ನತ ದರ್ಜೆಯ ಸೇವೆಯನ್ನು ಎನ್‌ಎಬಿಎಚ್ (ನ್ಯಾಷನಲ್ ಅಕ್ರಿಡಿಟೇಷೇನ್ ಬೋರ್ಡ್ ಆಫ್ ಹಾಸ್ಪಿಟಲ್ ಅಂಡ್ ಹೆಲ್ತ್ ಕೇರ್ ಪ್ರವೈಡರ್ಸ್) ಮಾನದಂಡಕ್ಕನುಗುಣವಾಗಿ ರೋಗಿಗಳಿಗೆ ಕೊಡುವ ಕಾರ್ಯದಲ್ಲಿ ತನ್ನನ್ನು ತೊಡಗಿಸಿಕೊಂಡಿತ್ತು. ಅಲ್ಲಿ ಆಸ್ಪತ್ರೆಯ ವಾತಾವರಣ, ಲ್ಯಾಬ್ ಸೌಲಭ್ಯ, ಅರೆ ವೈದ್ಯಕೀಯ ಸಿಬ್ಬಂದಿ ನೀಡುವ ಸೇವೆ ಮತ್ತು ವೈದ್ಯರು ರೋಗಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅವರಿಗೆ ನೀಡುವ ಚಿಕಿತ್ಸೆ ಅವರನ್ನು ಸಂತುಷ್ಟರನ್ನಾಗಿ ಮಾಡಿ ಮನೆಗೆ ಮರಳುವ ಸನ್ನಿವೇಶ ಮೊದಲಾದವುಗಳನ್ನು ಪರಿಗಣನೆಗೆ ತೆಗೆದುಕೊಳ್ಳಲಾಗಿತ್ತು.
ಪ್ರತಿಯೊಂದಕ್ಕೂ ಅಂಕಗಳನ್ನು ನೀಡಿ ಮೌಲ್ಯಮಾಪನ ಮಾಡಿದ ಎನ್‌ಎಬಿಎಚ್ ಸಂಸ್ಥೆ ಶ್ರೀದೇವಿ ವೈದ್ಯಕೀಯ ಕಾಲೇಜಿನ ಆಸ್ಪತ್ರೆಗೆ ರಾಷ್ಟ್ರೀಯ ಮಾನ್ಯತೆ ನೀಡಿದೆ. ಎನ್‌ಎಬಿಎಚ್ ಸಂಸ್ಥೆ ತನ್ನ ಮಾರ್ಗದರ್ಶಿ ಸೂತ್ರಗಳ ಅನ್ವಯ ಈ ಸಂಸ್ಥೆ ರೋಗಿಗೆ ಗುಣಮಟ್ಟದ ಸೇವೆ ಕೊಡುತ್ತಿದೆಯೇ ಎಂಬುದನ್ನು ಪರಿಶೀಲಿಸುತ್ತದೆ. ಕೋವಿಡ್ ಸಂದರ್ಭದಲ್ಲಿ ಶ್ರೀದೇವಿ ಆಸ್ಪತ್ರೆ ಸಲ್ಲಿಸಿದ ಸೇವೆಯನ್ನು ತುಮಕೂರು ಜಿಲ್ಲಾಡಳಿತ ಪ್ರಶಂಸೆ ಮಾಡಿದೆ. 2013ರಲ್ಲಿ ಪ್ರಾರಂಭವಾದ ಶ್ರೀದೇವಿ ವೈದ್ಯಕೀಯ ಕಾಲೇಜು ಕಳೆದ ಐದು ವರ್ಷಗಳಲ್ಲಿ 750 ವೈದ್ಯಕೀಯ ಪದವೀಧರರನ್ನು ಸಮಾಜಕ್ಕೆ ಕಾಣಿಕೆಯಾಗಿ ನೀಡಿದೆ. ಆಸ್ಪತ್ರೆ ಮತ್ತು ಕಾಲೇಜಿನಲ್ಲಿ ಒಟ್ಟು 1800 ಸಿಬ್ಬಂದಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಶ್ರೀದೇವಿ ವೈದ್ಯಕೀಯ ಕಾಲೇಜಿನಲ್ಲಿರುವ 'ವೈರಾಣು ಪರೀಕ್ಷಾ ಪ್ರಯೋಗಾಲಯ'ದಿಂದ ಬಹುಬೇಗ ಫಲಿತಾಂಶ ಪಡೆಯಬಹುದಾಗಿದೆ. ಈ ಪ್ರಯೋಗಾಲಯಕ್ಕೂ ರಾಷ್ಟ್ರೀಯ ಮಾನ್ಯತೆ ದೊರಕಿದೆ.

ಇಂತಹ ಮಾನ್ಯತೆ ಪಡೆದ ತುಮಕೂರು ಜಿಲ್ಲೆಯ ವೈದ್ಯಕೀಯ ಕಾಲೇಜಿನ ಆಸ್ಪತ್ರೆಯ ಗುಂಪಿನಲ್ಲಿ ಶ್ರೀದೇವಿ ಆಸ್ಪತ್ರೆಗೆ ಮೊದಲ ಆದ್ಯತೆ ದೊರಕಿದೆ. ಇದೊಂದು ಸಂತಸದ ವಿಚಾರವಾಗಿದೆ. ಇಂತಹ ಮಾನ್ಯತೆ ಪಡೆಯಲು ನಿರಂತರ ಪರಿಶ್ರಮ ಮತ್ತು ಗುಣಮಟ್ಟದ ಸೇವೆಯೇ ಅರ್ಹತೆಯಾಗಿರುತ್ತದೆ. ಇದಕ್ಕಾಗಿ ಶ್ರೀದೇವಿ ಆಸ್ಪತ್ರೆಯ ಮತ್ತು ಕಾಲೇಜಿನ ವೈದ್ಯರು ಮತ್ತು ಅರೆ ವೈದ್ಯಕೀಯ ಸಿಬ್ಬಂದಿಯ ಶ್ರಮ ಕಾರಣವಾಗಿದೆ. ಇದಕ್ಕೆ ಮಾರ್ಗದರ್ಶನ ನೀಡಿದ ಸಂಸ್ಥೆಯ ಅಧ್ಯಕ್ಷರಾದ ಡಾ.ಎಂ. ಆರ್.ಹುಲಿನಾಯ್ಕರ್, ಕಾಲೇಜಿನ ನಿರ್ದೇಶಕರಾದ ಡಾ.ರಮಣ ಹುಲಿನಾಯ್ಕರ್, ವೈದ್ಯಕೀಯ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ.ಎಂ.ಎಲ್. ಹರೇಂದ್ರಕುಮಾರ್, ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರಾದ ಡಾ.ಕೆ.ಮೋಹನ್‌ಕುಮಾರ್ ಮತ್ತು ಉಪಪ್ರಾಂಶುಪಾಲರಾದ ಡಾ.ರೇಖಾ ಗುರುಮೂರ್ತಿ ಅವರು ಕಾರಣಕರ್ತರಾಗಿರುತ್ತಾರೆ. ಮಾನ್ಯತೆ ಹೊಂದಲು ಶ್ರಮಿಸಿದ ಪ್ರತಿಯೊಬ್ಬರಿಗೂ ಅಭಿನಂದನೆಗಳು ಸಲ್ಲಬೇಕು. ಎನ್‌ಎಬಿಎಚ್ ಮಾನ್ಯತೆ ಪಡೆದಿರುವುದರಿಂದ ಮುಂದೆಯೂ ಸಹ ಚಿಕಿತ್ಸೆ ಮತ್ತು ಸುರಕ್ಷತೆ ಇನ್ನಷ್ಟು ಉತ್ತಮವಾಗಲಿದೆ.

ಇದಕ್ಕೆ ಕಾರಣಕರ್ತರಾದ ಪ್ರತಿಯೊಬ್ಬರನ್ನೂ ಸಂಸ್ಥೆಯ ಅಧ್ಯಕ್ಷರಾದ ಡಾ.ಎಂ.ಆರ್, ಹುಲಿನಾಯ್ಕರ್ ಮೇ.16ರಂದು ನಡೆದ ಪತ್ರಿಕಾಗೋಷ್ಠಿಯಲ್ಲಿ ಅಭಿನಂದಿಸಿದರು.

ಶ್ರೀದೇವಿ ವೈದ್ಯಕೀಯ ನಿರ್ದೇಶಕರಾದ ಡಾ.ರಮಣ್ ಎಂ ಹುಲಿನಾಯ್ಕರ್‌ರವರು ಈ ಸಂದರ್ಭದಲ್ಲಿ ಮಾತನಾಡುತ್ತಾ "ಆಸ್ಪತ್ರೆ ಆರಂಭವಾದಾಗಿನಿಂದಲೂ ಉತ್ತಮ ಗುಣಮಟ್ಟದ ಚಿಕಿತ್ಸೆಯನ್ನು ರೋಗಿಗಳಿಗೆ ನೀಡುತ್ತಾ ಬಂದಿದೆ. ಅದಕ್ಕಾಗಿ ಪ್ರಾಥಮಿಕ ಹಂತದ ಮಾನ್ಯತೆ ದೊರಕಿತ್ತು. ಈಗ ಎನ್‌ಎಬಿಎಚ್ ಮಾನ್ಯತೆ ಪಡೆದ ಜಿಲ್ಲೆಯ ಮೊದಲ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆ ನಮ್ಮದಾಗಿರುವುದು ಸಂತಸದ ಸಂಗತಿ" ಎಂದರು.

ಶ್ರೀದೇವಿ ಮಾನವ ಸಂಪನ್ಮೂಲ ವಿಭಾಗದ ನಿರ್ದೇಶಕರಾದ ಎಂ.ಎಸ್.ಪಾಟೀಲ್ ಅವರು "ಕಳೆದ ವರ್ಷ ಡಿಸೆಂಬರ್ 15 ರಂದು ಎನ್.ಎ.ಬಿ.ಹೆಚ್. ಮಾನ್ಯತೆಗಾಗಿ ದೆಹಲಿಯಿಂದ ತಂಡ ಬಂದು ಆಸ್ಪತ್ರೆಯಲ್ಲಿ ಪರಿಶೀಲನೆ ಮಾಡಿ ವರದಿಯನ್ನು ಸಿದ್ಧಪಡಿಸಿತ್ತು. ಅದರ ಫಲವಾಗಿ ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಆಸ್ಪತ್ರೆಯ ಉತ್ತಮ ಗುಣಮಟ್ಟ ಮತ್ತು ಸುರಕ್ಷಿತ ಚಿಕಿತ್ಸೆಗಾಗಿ (ಎನ್‌ಎಬಿಎಚ್) ಮಾನ್ಯತೆ ದೊರಕಿದೆ. ಇದು ನಮ್ಮ ಸಂಸ್ಥೆಯಲ್ಲಿರುವ ಸಿಬ್ಬಂದಿಯ ಸಾಮೂಹಿಕ ಶ್ರಮದ ಫಲ. ಅದಕ್ಕಾಗಿ ಎಲ್ಲರಿಗೂ ಅಭಿನಂದನೆಗಳು" ಎಂದರು.

■ ವರದಿ: ಎನ್.ಆನಂದ

## ಶ್ರೀದೇವಿ ವೈದ್ಯಕೀಯ ಕಾಲೇಜಿನಲ್ಲಿ ಕ್ರೀಡೆ ಮತ್ತು ಸಾಂಸ್ಕೃತಿಕ ವಾರ್ಷಿಕೋತ್ಸವ

"ವೈದ್ಯ ವಿದ್ಯಾರ್ಥಿಗಳೂ ಶಿಕ್ಷಣದ ಜೊತೆಗೆ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕು ವಿದ್ಯಾರ್ಥಿಗಳು ತಮ್ಮಲ್ಲಿ ಅಡಗಿರುವ ಕಲಾತ್ಮಕ ಪ್ರತಿಭೆಯನ್ನು ಹೊರಹಾಕಬೇಕು. ವೈದ್ಯ ವಿದ್ಯಾರ್ಥಿಗಳು ತಮ್ಮ ದೈನಂದಿನ ಅಧ್ಯಯನದ ಜೊತೆಯಲ್ಲಿ ಈ ರೀತಿಯ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುತ್ತಿರುವುದು ಹರ್ಷ ತಂದಿದೆ. ವಿದ್ಯಾರ್ಥಿಗಳು ತಮ್ಮ ಗುರುಗಳ ಬಗ್ಗೆ ಸದಾ ಗೌರವವನ್ನು ಹೊಂದಿರಬೇಕು, ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗೆ ಸಾಂಸ್ಕೃತಿಕ ಆಸಕ್ತಿ ಸಹಾಯಕವಾಗುತ್ತದೆ. ಶಿಕ್ಷಣದ ಜೊತೆಗೆ ವಿದ್ಯಾರ್ಥಿಗಳು ಕ್ರೀಡೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಹೆಚ್ಚಾಗಿ ಪಾಲ್ಗೊಳ್ಳಬೇಕು" ಎಂದು ಶ್ರೀದೇವಿ ವೈದ್ಯಕೀಯ ಕಾಲೇಜಿನ ನಿರ್ದೇಶಕರಾದ ಡಾ.ರಮಣ್ ಎಂ ಹುಲಿನಾಯ್ಕರ್ ಅವರು ತಿಳಿಸಿದರು. ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಆಸ್ಪತ್ರೆಯ ವತಿಯಿಂದ ಹಮ್ಮಿಕೊಂಡಿದ್ದ 'ಶ್ರೀಸಮೃಹ್–2023 ನೇ ಕ್ರೀಡೆ ಮತ್ತು ಸಾಂಸ್ಕೃತಿಕ ಉತ್ಸವ'ದಲ್ಲಿ ಮಾತನಾಡುತ್ತಾ ತಿಳಿಸಿದರು.

ಶ್ರೀದೇವಿ ಸಂಸ್ಥೆಯ ಮಾನವ ಸಂಪನ್ಮೂಲ ಮತ್ತು ಮಾಹಿತಿ ತಂತ್ರಜ್ಞಾನ ನಿರ್ದೇಶಕರಾದ ಎಂ.ಎಸ್.ಪಾಟೀಲ್ ಅವರು "ಕ್ರೀಡಾ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದ ಎಲ್ಲಾ ವಿದ್ಯಾರ್ಥಿಗಳಿಗೆ ಶುಭ ಹಾರೈಸಿ, ವಿದ್ಯಾರ್ಥಿಗಳ ಶಿಕ್ಷಣಕ್ಕೆ ಕ್ರೀಡೆ ಪೂರಕವಾಗಿರುತ್ತದೆ" ಎಂದರು.

ಶ್ರೀದೇವಿ ಆಸ್ಪತ್ರೆಯ ನೇತ್ರತಜ್ಞರಾದ ಡಾ.ಲಾವಣ್ಯ ರಮಣ ಅವರು "ನಮ್ಮ ಪ್ರಾಚೀನ ಸಂಸ್ಕೃತಿಯಲ್ಲಿ ಶ್ರದ್ಧೆ ಮತ್ತು ಗುರು–ಹಿರಿಯರ ಮಾರ್ಗದರ್ಶನವನ್ನು ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಅಳವಡಿಸಿಕೊಂಡರೆ ಉತ್ತಮ ಸಮಾಜ ನಿರ್ಮಾಣ ಮಾಡಲು ಸಾಧ್ಯ. ಎಲ್ಲಾ ವಿದ್ಯಾರ್ಥಿಗಳು ಕ್ರೀಡೆಗಳಲ್ಲಿ ತೊಡಗಿಸಿಕೊಳ್ಳುವ ಅಗತ್ಯವಿದೆ" ಎಂದು ಅಭಿಪ್ರಾಯಪಟ್ಟರು.

# ಶ್ರೀದೇವಿ ಆಸ್ಪತ್ರೆಯಿಂದ ವಿಶ್ವ ಶ್ರವಣ ದಿನ ಆಚರಣೆಗೆ ಚಾಲನೆ

■ **ಡಾ.ಯದುನಂದನ್**
**ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯ**
**ವಾಕ್ ಮತ್ತು ಶ್ರವಣ ತಜ್ಞ**

"ಇತ್ತೀಚಿನ ದಿನಗಳಲ್ಲಿ ಯಾವುದೇ ಔಷಧಿಯನ್ನು ವೈದ್ಯರ ಸಲಹೆ ಇಲ್ಲದೆ ಉಪಯೋಗಿಸುವುದು ಶ್ರವಣ ದೋಷಗಳಿಗೆ ಕಾರಣವಾಗುವ ಸಾಧ್ಯತೆಯಿದೆ. ಟಿ.ವಿ. ರೇಡಿಯೋ, ಇಯರ್‌ಫೋನ್‌ನಂತಹ ಉಪಕರಣಗಳಿಂದ ಹಾಗೂ ಇತರೆ ಜೋರಾದ ಶಬ್ದಗಳಿಂದ ದೂರವಿರುವ ಮೂಲಕ ನಮ್ಮ ಕಿವಿಗಳನ್ನು ನಾವೇ ರಕ್ಷಿಸಿಕೊಳ್ಳಬೇಕು" ಎಂದು ಬೆಂಗಳೂರಿನ ನಿಮ್ಹಾನ್ಸ್ ಮಾಜಿ ನಿರ್ದೇಶಕರಾದ ಡಾ.ಶಿವಶಂಕರ್ ಅವರು 'ವಿಶ್ವ ಶ್ರವಣ ದಿನ ಆಚರಣೆಯ' ಸಂದರ್ಭದಲ್ಲಿ ಉಪನ್ಯಾಸ ನೀಡುತ್ತಾ ಹೇಳಿದರು. ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಆಸ್ಪತ್ರೆಯ ವತಿಯಿಂದ ಇತ್ತೀಚೆಗೆ ವಿಶ್ವ ಶ್ರವಣ ದಿನದ ಅಂಗವಾಗಿ ವಾಕ್ ಮತ್ತು ಶ್ರವಣ (ಇ.ಎನ್.ಟಿ) ವಿಭಾಗದ ವತಿಯಿಂದ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಇದೇ ಸಂದರ್ಭದಲ್ಲಿ "Ear and hearing care for all" ಎಂಬ 2023ರ ಘೋಷವಾಕ್ಯದೊಂದಿಗೆ ವಿಶ್ವ ಶ್ರವಣ ದಿನದ ಆಚರಿಸಲಾಗುತ್ತಿದೆ" ಎಂದರು.

ಇದೇ ಸಂದರ್ಭದಲ್ಲಿ ಬೆಂಗಳೂರಿನ ನಿಮ್ಹಾನ್ಸ್ ಆಸ್ಪತ್ರೆಯ ಸಹಾಯಕ ಪ್ರಾಧ್ಯಾಪಕರಾದ ಡಾ.ಪ್ರದೀಪ್ ಯುವರಾಜು ಅವರು ಕಿವಿಗೆ ಸಂಬಂಧಿಸಿದ ಕಾಯಿಲೆಗಳು ಅದಕ್ಕೆ ಬೇಕಾಗುವ ಔಷಧಿಗಳು, Cochlear Implant ಕೆಲವು ಕಿವಿಗೆ ಸಂಬಂಧಿಸಿದ ಕೆಲವು ವಿವರಗಳನ್ನು ತಿಳಿಸಿದರು.

ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯದ ವಾಕ್ ಮತ್ತು ಶ್ರವಣ ತಜ್ಞರಾದ ಡಾ.ಯದುನಂದನ್ ಅವರು "ಕಿವಿ ಸೋರುವಿಕೆ, ಮುರುಕಳಿಸುವ ನೋವು ಅಥವಾ ರಕ್ತಸ್ರಾವ, ಗಂಭೀರ ರೋಗ, ಮಕ್ಕಳಲ್ಲಿ ಕಂಡುಬರುವ ವಾಕ್ ಮತ್ತು ಶ್ರವಣ ಸಂಬಂಧಿತ ಕಾಯಿಲೆಗಳನ್ನು ಪರಿಚಯಿಸಿ, ಕಿವಿಗೆ ಸಂಬಂಧಿಸಿದ ಕಾಯಿಲೆಗಳನ್ನು ಒಂದಾದ Termites ಎಂಬುದರ ಬಗ್ಗೆ ತಿಳಿಸಿದರು. ಕಿವಿಗೆ ಸಂಬಂಧಪಟ್ಟ ಯಾವುದೇ ದೋಷ ಕಂಡುಬಂದಲ್ಲಿ ಆರಂಭದಿಂದಲೇ ವೈದ್ಯರನ್ನು ಸಂಪರ್ಕಿಸಿ ಶ್ರವಣದೋಷ ಪರೀಕ್ಷೆಗೊಳಗಾಗಿ ಚಿಕಿತ್ಸೆಯನ್ನು ಪಡೆಯಬೇಕು. ಗರ್ಭಾವಸ್ಥೆಯಲ್ಲಿ



ಮಗುವಿಗೆ ಕೇಳಿಸುವ ಸಾಮರ್ಥ್ಯವಿದ್ದು, ಗರ್ಭಿಣಿ ಸ್ತ್ರೀಯರಲ್ಲಿ ಮಾನಸಿಕ ಒತ್ತಡ ಅಥವಾ ಹೆಚ್ಚು ಔಷಧ ಬಳಕೆಯಿಂದ ವಾಕ್ ಮತ್ತು ಶ್ರವಣ ಸಂಬಂಧಿಸಿದ ಕಾಯಿಲೆಗಳು ಕಂಡುಬರುತ್ತವೆ. ಶ್ರೀದೇವಿ ಆಸ್ಪತ್ರೆಯಲ್ಲಿ ಒ.ಎ.ಇ. ವಾಕ್ ಮತ್ತು ಶ್ರವಣ ದೋಷ ಸಂಬಂಧಿತ ಎಲ್ಲಾ ಕಾಯಿಲೆಗಳಿಗೂ ಚಿಕಿತ್ಸೆ ನೀಡಲಾಗುತ್ತಿದೆ. ಎಲ್ಲಾ ನವಜಾತ ಶಿಶುಗಳಿಗೂ ಹುಟ್ಟಿದ 72 ಗಂಟೆಯ ನಂತರ ಕಿವಿ ತಪಾಸಣೆ ಮಾಡಲಾಗುತ್ತದೆ. ಇದರ ಸಾರ್ವಜನಿಕರು ಸದುಪಯೋಗವನ್ನು ಪಡೆದುಕೊಳ್ಳಬೇಕು" ಎಂದರು.

ಈ ಕಾರ್ಯಕ್ರಮಕ್ಕೆ ಶ್ರೀದೇವಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಡಾ.ಎಂ.ಆರ್. ಹುಲಿನಾಯ್ಕರ್, ಶ್ರೀದೇವಿ ವೈದ್ಯಕೀಯ ನಿರ್ದೇಶಕರಾದ ಡಾ.ರಮಣ್ ಎಂ ಹುಲಿನಾಯ್ಕರ್, ಶ್ರೀದೇವಿ ವೈದ್ಯಕೀಯ ನಿರ್ದೇಶಕರಾದ ಡಾ.ರಮಣ್ ಎಂ ಹುಲಿನಾಯ್ಕರ್, ಶ್ರೀದೇವಿ ಸಂಸ್ಥೆಯ ಮಾನವ ಸಂಪನ್ಮೂಲ ವಿಭಾಗದ ನಿರ್ದೇಶಕರಾದ ಎಂ.ಎಸ್. ಪಾಟೀಲ್, ನೇತ್ರ ತಜ್ಞರಾದ ಡಾ.ಲಾವಣ್ಯ, ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯ ಇ.ಎನ್.ಟಿ. ವಿಭಾಗದ ಮುಖ್ಯಸ್ಥರಾದ ಡಾ.ಕೆ.ಎಲ್.ಶಿವಕುಮಾರ್ ಇ.ಎನ್.ಟಿ. ವಿಭಾಗದ ವೈದ್ಯರಾದ ಡಾ.ವೆಂಕಟರಾಜಮ್ಮ, ಡಾ.ಎನ್.ಸುಚಿತ್ರ ಮತ್ತು ಡಾ.ಅಶ್ವಿನಿರವರು ಕಾರ್ಯಕ್ರಮಕ್ಕೆ ಶುಭ ಹಾರೈಸಿದರು.

# ಶ್ರೀದೇವಿ ಪ್ಯಾರಾ ಮೆಡಿಕಲ್ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಉಚಿತ ವಿದ್ಯಾರ್ಥಿವೇತನ

"ವೈದ್ಯಕೀಯ ಕ್ಷೇತ್ರದಲ್ಲಿ ಹೆಚ್ಚಿನ ಪ್ಯಾರಾ ಮೆಡಿಕಲ್ ಕೋರ್ಸ್‌ಗಳಿದ್ದು, ಕರ್ನಾಟಕ ಸರ್ಕಾರದ ವತಿಯಿಂದ ಒಂಬತ್ತು ಡಿಪ್ಲೊಮಾ ಕೋರ್ಸ್‌ಗಳ ಅಧ್ಯಯನಕ್ಕೆ ಅವಕಾಶವಿರುತ್ತದೆ. ಅಷ್ಟು ಕೋರ್ಸ್‌ಗಳು ಶ್ರೀದೇವಿ ಪ್ಯಾರಾ ಮೆಡಿಕಲ್ ಕಾಲೇಜಿನಲ್ಲಿದೆ. ಶ್ರೀದೇವಿ ಸಂಸ್ಥೆ ಅತಿ ಹೆಚ್ಚು ಪ್ಯಾರಾ ಮೆಡಿಕಲ್ ಕೋರ್ಸ್‌ಗಳನ್ನು ಹೊಂದಿದೆ ಎಂಬ ಹೆಗ್ಗಳಿಕೆ ಪಡೆದಿರುತ್ತದೆ. ಆರ್ಥಿಕವಾಗಿ ದುರ್ಬಲರಾಗಿರುವ ವಿದ್ಯಾರ್ಥಿಗಳಿಗೆ ಪ್ಯಾರಾ ಮೆಡಿಕಲ್ ಕೋರ್ಸ್‌ನ್ನು ಅಧ್ಯಯನ ಮಾಡಲು ಶ್ರೀದೇವಿ ಚಾರಿಟಬಲ್ ಟ್ರಸ್ಟ್, ವಿದ್ಯಾರ್ಥಿವೇತನ ನೀಡಿ ಅವರು ಉತ್ತಮ ಶಿಕ್ಷಣ ಪಡೆಯಲು ಅವಕಾಶ ಕಲ್ಪಿಸಿರುವುದು ಸ್ವಾಗತಾರ್ಹ ವಿಚಾರ. ಎಸ್.ಎಸ್.ಎಲ್.ಸಿ. ಪಾಸಾಗಿರುವ ವಿದ್ಯಾರ್ಥಿಗಳಿಗೆ ಇಂದು ಕಾಮನ್ ಸ್ಕಾಲರ್‌ಶಿಫ್ ಟೆಸ್ಟ್-2023 ಆಯೋಜನೆ ಮಾಡಿದ್ದು ಅದರ ಪ್ರಯೋಜನವನ್ನು ನೀವೆಲ್ಲಾ ಪಡೆಯುತ್ತಿರುವುದು ನನಗೆ ಸಂತೋಷ ತಂದಿದೆ. ಹಿಂದೆ ಪ್ಯಾರಾ ಮೆಡಿಕಲ್ ಕೋರ್ಸ್‌ಗಳೆಂದರೆ ನರ್ಸಿಂಗ್ ಮತ್ತು ಎಕ್ಸ್‌ರೇ ಟೆಕ್ನೀಷಿಯನ್ ಮಾತ್ರವಿದ್ದವು. ಇಂದು ಮೆಡಿಕಲ್‌ನ ವಿವಿಧ ವಿಭಾಗಗಳಿಗೆ ಸಂಬಂಧಪಟ್ಟ ಕೋರ್ಸ್‌ಗಳಿವೆ. ಓ.ಟಿ. ಅಂದರೆ ಶಸ್ತ್ರಚಿಕಿತ್ಸೆಯ ಕೊಠಡಿಯಲ್ಲಿ ಕೆಲಸ ಮಾಡಲು ಅರ್ಹತೆ ಪಡೆಯುವ ಕೋರ್ಸ್ ಇದೆ. ಕಣ್ಣಿನ ಪರೀಕ್ಷೆ ಮಾಡುವ ಕೋರ್ಸ್‌ಗಳಿವೆ. ಮೆಡಿಕಲ್ ರೆಕಾರ್ಡ್‌ನ ಸಂರಕ್ಷಣೆ ಮಾಡುವ ಪ್ಯಾರಾ ಮೆಡಿಕಲ್ ಅಧ್ಯಯನ ಮಾಡಲು ವಿಷಯಗಳಿವೆ. ವೈದ್ಯಕೀಯ ಕ್ಷೇತ್ರದಲ್ಲಿ ವೈದ್ಯರಷ್ಟೇ ಪ್ರಾಮುಖ್ಯತೆ ಪ್ಯಾರಾ ಮೆಡಿಕಲ್ ಸಿಬ್ಬಂದಿಗೂ ಇರುತ್ತದೆ. ಅದರ ಉಪಯೋಗವನ್ನು ತುಮಕೂರು ಜಿಲ್ಲೆಯ ವಿದ್ಯಾರ್ಥಿಗಳು ಪಡೆದುಕೊಳ್ಳಬೇಕು. ಪ್ಯಾರಾ ಮೆಡಿಕಲ್ ಕೋರ್ಸ್ ಇತರ ಕೋರ್ಸ್‌ಗಳಂತೆ ಅನೇಕ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ತೆಗೆದುಕೊಳ್ಳಲು ನಿಮಗೆ ಅರ್ಹತೆ ದೊರಕಿಸಿ ಕೊಡುತ್ತದೆ. ಶ್ರೀದೇವಿ ಶಿಕ್ಷಣ ಸಂಸ್ಥೆಯಲ್ಲಿ ಪ್ಯಾರಾ ಮೆಡಿಕಲ್ ಕೋರ್ಸ್‌ಗಳನ್ನು ಅಧ್ಯಯನ ಮಾಡುವವರು ತುಂಬಾ ಅದೃಷ್ಟಶಾಲಿಗಳು. ನಿಮಗೆ ಸುಸಜ್ಜಿತವಾದ ಆಸ್ಪತ್ರೆ ಮತ್ತು ಮೆಡಿಕಲ್ ಕಾಲೇಜಿನ ತಜ್ಞ ಉಪನ್ಯಾಸಕರು ದೊರೆಯುತ್ತಾರೆ. ಅದನ್ನು ಸದುಪಯೋಗಪಡಿಸಿಕೊಂಡು ಜೀವನದಲ್ಲಿ ಯಶಸ್ಸು ಪಡೆಯಿರಿ" ಎಂದು ಬೆಂಗಳೂರಿನ ಪ್ಯಾರಾ ಮೆಡಿಕಲ್ ಮಂಡಳಿಯ ಸದಸ್ಯರಾದ ಡಾ.ವಿಶ್ವನಾಥ್ ಅವರು 7ರಂದು ಶ್ರೀದೇವಿ ಪ್ಯಾರಾ ಮೆಡಿಕಲ್ ಕಾಲೇಜಿನಲ್ಲಿ ನಡೆದ ವಿದ್ಯಾರ್ಥಿವೇತನ ಪೂರ್ವಭಾವಿ ಪರೀಕ್ಷೆಯಲ್ಲಿ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳಿಗೆ ಅಭಿನಂದನೆ ಹೇಳುತ್ತಾ ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಮುಖ್ಯಅತಿಥಿಗಳಾಗಿ ಆಗಮಿಸಿದ್ದ ಬೆಂಗಳೂರಿನ ಸುವರ್ಣಮುಖಿ ಆಶ್ರಮದ ಸಂಸ್ಥಾಪಕರು ಮತ್ತು ಅಮೆರಿಕದಲ್ಲಿ ಗ್ಯಾಸ್ಟ್ರೋಎಂಟರಾಲಜಿ ವಿಷಯದಲ್ಲಿ ವಿಶೇಷ ತಜ್ಞತೆ ಪಡೆದಿರುವ ಡಾ.ಆಚಾರ್ಯ ನಾಗರಾಜ್ ಅವರು ಮಾತನಾಡುತ್ತಾ "ವೈದ್ಯಕೀಯ ಕ್ಷೇತ್ರದಲ್ಲಿ ಕೆಲಸ ಮಾಡುವ ನಾವು ಆಸ್ಪತ್ರೆಗೆ ಬರುವ ಪ್ರತಿಯೊಬ್ಬರ ರೋಗಿಯಲ್ಲಿಯೂ ದೇವರನ್ನು ಕಾಣಬೇಕು, ರೋಗಿಗಳಿಗೆ ಉಪಚಾರ ಮಾಡುವಾಗ ಅವರ ನೋವುಗಳಿಗೆ ಸ್ಪಂದಿಸಿ ಉತ್ತಮ ಸೇವೆ ಮಾಡಬೇಕು. ಪ್ರತಿಯೊಬ್ಬ ತಂತ್ರಜ್ಞರೂ ತಮ್ಮ ಕಾರ್ಯವ್ಯಾಪ್ತಿಯಲ್ಲಿ ಬರುವ ಉಪಕರಣಗಳ ಬಗ್ಗೆ ಕೂಲಂಕಷವಾಗಿ ಅಧ್ಯಯನ ಮಾಡಿದರೆ ಮಾತ್ರ ರೋಗಿಗಳಿಗೆ ಉತ್ತಮ ಚಿಕಿತ್ಸೆ ನೀಡಲು ಸಹಾಯವಾಗುತ್ತದೆ. ರೋಗಿಗೆ ಚಿಕಿತ್ಸೆ ನೀಡುವಾಗ ಪ್ರತಿಯೊಬ್ಬ ವೈದ್ಯರಿಗೂ ತಂತ್ರಜ್ಞರ ಅಂದರೆ ಪ್ಯಾರಾ ಮೆಡಿಕಲ್ ಸಿಬ್ಬಂದಿಯ ಅವಶ್ಯಕತೆ ಇರುತ್ತದೆ.



**ಬೆಂಗಳೂರಿನ ಪ್ಯಾರಾ ಮೆಡಿಕಲ್ ಮಂಡಳಿಯ ಸದಸ್ಯರಾದ ಡಾ.ವಿಶ್ವನಾಥ್, ಬೆಂಗಳೂರಿನ ಸುವರ್ಣಮುಖಿ ಆಶ್ರಮದ ಡಾ.ಆಚಾರ್ಯ ನಾಗರಾಜ್, ಶ್ರೀದೇವಿ ಸಮೂಹ ವಿದ್ಯಾಸಂಸ್ಥೆಗಳ ಡಾ.ಎಂ.ಆರ್.ಹುಲಿನಾಯ್ಕರ್, ಶ್ರೀದೇವಿ ಆಸ್ಪತ್ರೆಯ ನೇತ್ರತಜ್ಞರಾದ ಡಾ.ಲಾವಣ್ಯ, ಶ್ರೀದೇವಿ ಸಂಸ್ಥೆಯ ಆಡಳಿತಾಧಿಕಾರಿಯಾದ ಟಿ.ವಿ.ಬ್ರಹ್ಮದೇವಯ್ಯ, ಶ್ರೀದೇವಿ ಪ್ಯಾರಾ ಮೆಡಿಕಲ್ ಕಾಲೇಜಿನ ಪ್ರಾಂಶುಪಾಲರಾದ ಡಾ.ಎಂ.ಸಿ.ಕೃಷ್ಣ, ಉಪಪ್ರಾಂಶುಪಾಲರಾದ ಡಾ.ಸಿ.ಪಿ.ಚಂದ್ರಪ್ಪ ಹಾಗೂ ಲೇಖಕರಾದ ಡಾ.ಕೆ.ಆರ್.ಕಮಲೇಶ್**

ವಿಶೇಷ ತರಬೇತಿ ಹೊಂದಿದ ತಂತ್ರಜ್ಞರ ಸಹಾಯವನ್ನು ಚಿಕಿತ್ಸೆ ನೀಡುವಲ್ಲಿ ವೈದ್ಯರು ಪಡೆದರೆ ರೋಗಿಗೆ ಅನುಕೂಲವಾಗುತ್ತದೆ. ಪ್ರತಿಯೊಬ್ಬ ರೋಗಿಯಲ್ಲಿಯೂ ನಾವು ದೇವರನ್ನು ಕಾಣಬೇಕು. ಏಕೆಂದರೆ ಜನರು ವೈದ್ಯರನ್ನು ದೇವರು ಎಂದು ಪರಿಗಣಿಸುತ್ತಾರೆ. ವೈದ್ಯರ ವೃತ್ತಿ ಅತ್ಯಮೂಲ್ಯವಾದದ್ದು, ರೋಗಿಗಳಿಗೆ ಚಿಕಿತ್ಸೆ ನೀಡುವಾಗ ತನ್ನ ಒಡಹುಟ್ಟಿದವರ ತರಹ ಅವರನ್ನು ನೋಡಿಕೊಳ್ಳಬೇಕು" ಎಂದು ನೂತನವಾಗಿ ಪ್ಯಾರಾ ಮೆಡಿಕಲ್ ಕೋರ್ಸ್‌ಗೆ ಬರುವ ಯುವಕ-ಯುವತಿಯರಿಗೆ ಕಿವಿಮಾತು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶ್ರೀದೇವಿ ಸಮೂಹ ವಿದ್ಯಾಸಂಸ್ಥೆಗಳ ಸಂಸ್ಥಾಪಕರಾದ ಡಾ.ಎಂ.ಆರ್.ಹುಲಿನಾಯ್ಕರ್ ಅವರು "ಎಸ್.ಎಸ್.ಎಲ್.ಸಿ. ನಂತರ ವಿದ್ಯಾರ್ಥಿಗಳಿಗೆ ವೈದ್ಯಕೀಯ ಸೇವೆಗಳಲ್ಲಿ ಕೆಲಸ ಮಾಡುವ ಇಚ್ಛೆ ಇದ್ದಲ್ಲಿ ಅಂತಹ ವಿದ್ಯಾರ್ಥಿಗಳಿಗೆ ಉತ್ತಮ ಅವಕಾಶಗಳನ್ನು ಕಲ್ಪಿಸುವುದಕ್ಕಾಗಿ ನಮ್ಮ ಸಂಸ್ಥೆ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಡೆಸಿ ಮೊದಲ 5 ರ್‍ಯಾಂಕ್ ಪಡೆದವರಿಗೆ ಉಚಿತವಾಗಿ ಪ್ಯಾರಾ ಮೆಡಿಕಲ್ ಶಿಕ್ಷಣವನ್ನು ನೀಡುವ ಯೋಜನೆಯನ್ನು ಹೊಂದಿದೆ. ತದನಂತರದ ರ್‍ಯಾಂಕ್‌ಗಳಿಗೆ ಪ್ರತಿವರ್ಷ ಶೇ.50, ಶೇ.30, ಶೇ.20ರಷ್ಟು ವಿದ್ಯಾರ್ಥಿ ವೇತನ ನೀಡಲಾಗುವುದು. ಯಾವ ವಿದ್ಯಾರ್ಥಿಗಳು ಇಂದು ಪರೀಕ್ಷೆಯನ್ನು ಬರೆದಿದ್ದಾರೋ ಅಂತಹವರಿಗೆ ವಿಶೇಷವಾಗಿ 9 ಸಾವಿರದವರೆಗೆ ಶುಲ್ಕದಲ್ಲಿ ರಿಯಾಯಿತಿ ನೀಡಲಾಗುವುದು.

ಇಂದು ಉದ್ಯೋಗದ ದೃಷ್ಟಿಯಿಂದ ಪ್ಯಾರಾ ಮೆಡಿಕಲ್ ವಿದ್ಯಾರ್ಥಿಗಳಿಗೆ ಉತ್ತಮ ಅವಕಾಶವಿದೆ. ರಾಷ್ಟ್ರದ ಅನೇಕ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳು ಸಲ್ಲಿಸುವ ಬೇಡಿಕೆಗೆ ಅನುಗುಣವಾಗಿ ಅವರಿಗೆ ಪ್ಯಾರಾ ಮೆಡಿಕಲ್ ಸಿಬ್ಬಂದಿಯನ್ನು ಒದಗಿಸಲು ಸಾಧ್ಯವಾಗುತ್ತಿಲ್ಲ. ನೀವು ಪದವಿಯ ಜೊತೆ ವೃತ್ತಿ ಕೌಶಲ್ಯವನ್ನು ರೂಢಿಸಿಕೊಳ್ಳಬೇಕು. ಆಗ ಜಗತ್ತಿನ ಎಲ್ಲ ಕಡೆ ನಿಮಗೆ ಮನ್ನಣೆ ದೊರೆಯುತ್ತದೆ" ಎಂದರು

ಇದೇ ಸಂದರ್ಭದಲ್ಲಿ ಶ್ರೀದೇವಿ ಕಾಲೇಜಿನ ಮಾನವ ಸಂಪನ್ಮೂಲ ವಿಭಾಗದ ನಿರ್ದೇಶಕರಾದ ಎಂ.ಎಸ್.ಪಾಟೀಲ್‌ರವರು ಮಾತನಾಡುತ್ತಾ "ಬಡ, ಪ್ರತಿಭಾವಂತ ವಿದ್ಯಾರ್ಥಿಗಳನ್ನು ದೃಷ್ಟಿಯಲ್ಲಿರಿಸಿಕೊಂಡು ಸಂಸ್ಥೆ ವಿದ್ಯಾರ್ಥಿವೇತನ ಸ್ಥಾಪಿಸಿದೆ" ಎಂದರು.

ಶ್ರೀದೇವಿ ಪ್ಯಾರಾ ಮೆಡಿಕಲ್ ಕಾಲೇಜಿನ ಪ್ರಾಂಶುಪಾಲರಾದ ಡಾ.ಎಂ.ಸಿ.ಕೃಷ್ಣರವರು ಮಾತನಾಡುತ್ತಾ "ಶ್ರೀದೇವಿ ಪ್ಯಾರಾ ಮೆಡಿಕಲ್ ಕಾಲೇಜು ಪ್ರತಿಭಾವಂತ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗಾಗಿ ವಿದ್ಯಾರ್ಥಿ ವೇತನವನ್ನು ಸೃಷ್ಟಿಸಿದೆ. ಮೊದಲ 5 ರ್‍ಯಾಂಕ್ ಪಡೆದ ವಿದ್ಯಾರ್ಥಿಗಳಿಗೆ 1,20,000 ರೂ ಸ್ಕಾಲರ್ ಶಿಪ್, 6ರಿಂದ 15ನೇ ರ್‍ಯಾಂಕ್ ಗಳಿಸಿದವರಿಗೆ 60,000 ರೂ, 16ರಿಂದ 25ನೇ ರ್‍ಯಾಂಕ್ ಗಳಿಸಿದವರಿಗೆ 30,000 ರೂ, 26 ರಿಂದ 50ನೇ ರ್‍ಯಾಂಕ್ ಗಳಿಸಿದವರಿಗೆ 15,000 ರೂ, ಮತ್ತು 51ರಿಂದ ಮುಂದಿನ ರ್‍ಯಾಂಕ್ ಗಳಿಸಿದವರಿಗೆ 9ಸಾವಿರ ರೂ. ಸ್ಕಾಲರ್‌ಶಿಪ್ ನೀಡಲಾಗುವುದು. ಸ್ಕಾಲರ್‌ಶಿಪ್ ಪಡೆದವರು ಎಸ್.ಎಸ್.ಎಲ್.ಸಿ. ಉತ್ತೀರ್ಣರಾಗಿದ್ದರೆ 3ವರ್ಷ 3 ತಿಂಗಳ ಡಿಪ್ಲೊಮಾ, ಪಿ.ಯು.ಸಿ. ವಿಜ್ಞಾನ ವಿಭಾಗದಲ್ಲಿ ತೇರ್ಗಡೆಯಾಗಿದ್ದರೆ 2 ವರ್ಷ 3 ತಿಂಗಳ ತರಬೇತಿ ಮತ್ತು ಪಿ.ಯು.ಸಿ.ಯಲ್ಲಿ ಕಲಾ, ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳಾಗಿದ್ದರೆ ಅವರು ಮೆಡಿಕಲ್ ರೆಕಾರ್ಡ್ ಟೆಕ್ನಾಲಜಿ ಡಿಪ್ಲೊಮ ಪಡೆಯಬಹುದು" ಎಂದರು.

ಶ್ರೀದೇವಿ ಆಸ್ಪತ್ರೆಯ ನೇತ್ರತಜ್ಞರಾದ ಡಾ.ಲಾವಣ್ಯರವರು ಮಾತನಾಡುತ್ತಾ "ಉತ್ತಮ ತಂತ್ರಜ್ಞರನ್ನು ಸಮಾಜಕ್ಕೆ ಕೊಡುಗೆ ನೀಡುವುದರಲ್ಲಿ ಶ್ರೀದೇವಿ ವೈದ್ಯಕೀಯ ಸಂಸ್ಥೆ ಮಹತ್ವದ ಕೆಲಸ ಮಾಡುತ್ತಿದೆ. ಉತ್ತಮ ಪಠ್ಯಶಿಕ್ಷಣ ನೀಡುವುದರ ಜೊತೆಗೆ ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ನೈಪುಣ್ಯವನ್ನು ಪಡೆಯುವುದಕ್ಕಾಗಿ ಸುಸುಜ್ಜಿತ ವಿಶೇಷ ಪ್ರಯೋಗಾಲಯಗಳನ್ನು ಸ್ಥಾಪಿಸಲಾಗಿದೆ. ವಿಚಾರದ ಜೊತೆಗೆ ಪಠ್ಯ ಜ್ಞಾನದ ಜೊತೆ ಪ್ರಾಯೋಗಿಕ ತರಬೇತಿಗೆ ಆದ್ಯತೆ ನೀಡಲಾಗಿದೆ" ಎಂದರು.

ಶ್ರೀದೇವಿ ಸಂಸ್ಥೆಯ ಆಡಳಿತಾಧಿಕಾರಿಯಾದ ಟಿ.ವಿ.ಬ್ರಹ್ಮದೇವಯ್ಯ ಅವರು ಪ್ಯಾರಾ ಮೆಡಿಕಲ್ ಕೋರ್ಸ್‌ಗಳಲ್ಲಿ ವಿದ್ಯಾರ್ಥಿ ವೇತನ ಪಡೆದ ವಿದ್ಯಾರ್ಥಿಗಳ ಹೆಸರನ್ನು ಓದಿದರು. ಅವರುಗಳೆಂದರೆ ಮೊದಲನೇ ರ್‍ಯಾಂಕ್ ಗಿರೀಶ್ ಜಿ.ಟಿ., ಎರಡನೇ ರ್‍ಯಾಂಕ್ ಮಧು.ಎಂ., ಮೂರನೇ ರ್‍ಯಾಂಕ್ ಅಭಿಷೇಕ್.ಎ, ನಾಲ್ಕನೇ ರ್‍ಯಾಂಕ್ ನವೀನ್‌ಕುಮಾರ್ ಹೆಚ್.ಜೆ. ಐದನೇ ರ್‍ಯಾಂಕ್ ಚಿನ್ಮಯ. ಸುಮಾರು 600 ವಿದ್ಯಾರ್ಥಿ ವಿದ್ಯಾರ್ಥಿನಿಯರು ಈ ಪರೀಕ್ಷೆ ಬರೆದಿದ್ದರು.

ಶ್ರೀದೇವಿ ಪ್ಯಾರಾ ಮೆಡಿಕಲ್ ಕಾಲೇಜಿನ ಉಪಪ್ರಾಂಶುಪಾಲರಾದ ಡಾ.ಸಿ.ಪಿ.ಚಂದ್ರಪ್ಪ ಅವರು "ಪ್ಯಾರಾ ಮೆಡಿಕಲ್ ಕೋರ್ಸ್‌ಗಳನ್ನು ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ವಿಶೇಷವಾದ ವಸತಿ ಸೌಲಭ್ಯವನ್ನು ಕಲ್ಪಿಸಲಾಗಿದೆ ವಿದ್ಯಾರ್ಥಿಗಳು ಹೆಚ್ಚು ಸದೃಢರಾಗಲು ಕ್ರೀಡೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ ಹೆಚ್ಚಿನ ವಿವರಕ್ಕೆ ಮೊ.7411964324, 8073030776, 9566176468, 9449863468 ಇವರನ್ನು ಸಂಪರ್ಕಿಸಬಹುದು" ಎಂದರು.

## ನೂತನ ನರ್ಸಿಂಗ್ ವಿದ್ಯಾರ್ಥಿಗಳಿಗೆ ಸ್ವಾಗತ

"ನರ್ಸಿಂಗ್ ವಿದ್ಯಾರ್ಥಿಗಳಿಗೆ ಜ್ಯೋತಿ ಬೆಳಗಿಸುವುದರ ಹಿಂದಿನ ಮಹತ್ವವನ್ನು ತಿಳಿದುಕೊಳ್ಳಬೇಕು. ಪ್ರಸ್ತುತ ಆರೋಗ್ಯ ಕ್ಷೇತ್ರದಲ್ಲಿ ತೀವ್ರ ಬದಲಾವಣೆಯಾಗುತ್ತಿದೆ. ಯುವಜನಾಂಗವು ವೃತ್ತಿ ತರಬೇತಿ ಪಡೆಯುವ ದೃಷ್ಟಿಯಿಂದ ನರ್ಸಿಂಗ್‌ಕ್ಷೇತ್ರ ಉತ್ತಮ ಆಯ್ಕೆಯಾಗಿದೆ, ನರ್ಸಿಂಗ್ ವಿದ್ಯಾರ್ಥಿಗಳು ಉತ್ತಮ ಶುಶ್ರೂಷಕರಾಗಲು ಅಗತ್ಯವಾದ ಅರ್ಹತೆಯನ್ನು ಗಳಿಸಿಕೊಳ್ಳಬೇಕು. ಶೈಕ್ಷಣಿಕ ಮತ್ತು ಪ್ರಾಯೋಗಿಕ ಅನುಭವಗಳೆರಡೂ ಉತ್ತಮ ನರ್ಸ್‌ಗಳಿಗೆ ಅಗತ್ಯವಾಗಿರುತ್ತವೆ. ನರ್ಸಿಂಗ್ ಕ್ಷೇತ್ರದಲ್ಲಿ ಕೆಲಸ ಮಾಡುವವರಿಗೆ ಸೇವಾಮನೋಭಾವ ಅತ್ಯಂತ ಅಗತ್ಯವಾಗಿರುತ್ತದೆ. ಇಂದು ವಿದ್ಯಾರ್ಥಿಗಳು ದೀಪ ಹಚ್ಚಿ ತಾವು ಸೇವಾಕ್ಷೇತ್ರಕ್ಕೆ ಮೀಸಲು ಎಂಬ ಸಂದೇಶ ಸಾರಿದ್ದಾರೆ" ಎಂದು ನೂತನ ವಿದ್ಯಾರ್ಥಿಗಳಿಗೆ ಪ್ರತಿಜ್ಞಾವಿಧಿಯನ್ನು ಬೋಧಿಸಿ ಬೆಂಗಳೂರಿನ ಆರ್.ವಿ.ಕಾಲೇಜು ಪ್ರಾಂಶುಪಾಲರಾದ ಹಾಗೂ ಬಿ.ಓ.ಎಸ್. ಅಧ್ಯಕ್ಷರು ಆರ್‌ಜಿಯುಹೆಚ್‌ಎಸ್ ಡಾ.ಎಸ್. ಆರ್. ಗಜೇಂದ್ರಸಿಂಗ್‌ರವರು ತಿಳಿಸಿದರು.

ಶ್ರೀದೇವಿ ನರ್ಸಿಂಗ್ ಕಾಲೇಜು ಹಾಗೂ ಶ್ರೀ ರಮಣಮಹರ್ಷಿ ನರ್ಸಿಂಗ್ ಕಾಲೇಜು, ಶ್ರೀ ದುರ್ಗಾಂಬಾ ಸ್ಕೂಲ್ ಆಫ್ ನರ್ಸಿಂಗ್ 2023ನೇ ಸಾಲಿನ ಪ್ರಥಮ ವರ್ಷದ ಡಿಪ್ಲೊಮಾ ನರ್ಸಿಂಗ್ ಮತ್ತು ಬಿ.ಎಸ್ಸಿ. ನರ್ಸಿಂಗ್ ವಿದ್ಯಾರ್ಥಿಗಳಿಗೆ ಜ್ಯೋತಿ ಬೆಳಗಿಸುವ ಹಾಗೂ ಪ್ರತಿಜ್ಞಾ ವಿಧಿ ಬೋಧಿಸುವ ಸಮಾರಂಭ ಮೇ 12 ರಂದು ಜರುಗಿತು.

ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಸಿದ್ಧಾರ್ಥ ಅಕಾಡೆಮಿ ಆಫ್ ಹೈಯರ್ ಎಜುಕೇಶನ್ ಉಪಕುಲಪತಿಗಳಾದ ಡಾ.ಕೆ.ಬಿ.ಲಿಂಗೇಗೌಡರವರು ನೆರವೇರಿಸಿ "ಪ್ರಸ್ತುತ ಆರೋಗ್ಯದ ಕ್ಷೇತ್ರದಲ್ಲಿ ಬದಲಾವಣೆಯಾಗುತ್ತಿದ್ದು, ವೃತ್ತಿ ತರಬೇತಿ ಪಡೆಯುವಲ್ಲಿ ನರ್ಸಿಂಗ್ ಕ್ಷೇತ್ರ ಉತ್ತಮವಾಗಿದೆ, ನರ್ಸಿಂಗ್ ವಿದ್ಯಾರ್ಥಿಗಳು ಉತ್ತಮ ಶುಶ್ರೂಷಕರಾಗಲು ಅಗತ್ಯವಾದ ಗುಣಗಳನ್ನು ಬೆಳಸಿಕೊಳ್ಳಬೇಕು" ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷರಾದ ಡಾ.ಎಂ.ಆರ್.ಹುಲಿನಾಯ್ಕರ್ ಅವರು ಮಾತನಾಡುತ್ತಾ "ನರ್ಸಿಂಗ್ ವಿದ್ಯಾರ್ಥಿಗಳು, ರೋಗಿಗಳನ್ನು ಆರೈಕೆ ಮಾಡುವಾಗ ಅವರ ಸಮಸ್ಯೆಯನ್ನು ಗುರುತಿಸಿ, ಮಾನವೀಯ ನೆಲೆಗಟ್ಟಿನಲ್ಲಿ ರೋಗಿಯ ಸೇವೆ ಮಾಡಬೇಕು, ವಿದ್ಯಾರ್ಥಿಗಳು ಉತ್ತಮ ಕೌಶಲ್ಯಗಳನ್ನು ಬೆಳೆಸಿಕೊಳ್ಳಬೇಕು. ನರ್ಸಿಂಗ್ ಕ್ಷೇತ್ರದಲ್ಲಿ ಹೆಚ್ಚು ಹೆಚ್ಚು ಉತ್ತಮ ಉದ್ಯೋಗಾವಕಾಶಗಳಿವೆ" ಎಂದರು.

ಕಾರ್ಯಕ್ರಮದಲ್ಲಿ ಗೌರವ ಅತಿಥಿಗಳಾಗಿ ಶ್ರೀದೇವಿ ಶಿಕ್ಷಣ ಸಂಸ್ಥೆಯ ಮಾನವ ಸಂಪನ್ಮೂಲ ವಿಭಾಗದ ನಿರ್ದೇಶಕರಾದ ಎಂ.ಎಸ್.ಪಾಟೀಲ್ ಅವರು ಭಾಗವಹಿಸಿದ್ದರು. ಶ್ರೀರಮಣ ಮಹರ್ಷಿ ನರ್ಸಿಂಗ್ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ದಯಾನಂದ್ ಅವರು ನರ್ಸಿಂಗ್ ಕೋರ್ಸ್ ಮಹತ್ವ ಹಾಗೂ ಉದ್ಯೋಗದ ಬೇಡಿಕೆಯ ಬಗ್ಗೆ ವಿಸ್ತಾರವಾಗಿ ವಿದ್ಯಾರ್ಥಿಗಳಿಗೆ ತಿಳಿಸಿಕೊಟ್ಟರು.

ಈ ಸಂದರ್ಭದಲ್ಲಿ ಶ್ರೀಸಿದ್ಧಾರ್ಥ ಅಕಾಡೆಮಿ ಆಫ್ ಹೈಯರ್ ಎಜುಕೇಶನ್ ಉಪಕುಲಪತಿಯಾದ ಡಾ.ಕೆ.ಬಿ.ಲಿಂಗೇಗೌಡ, ಜಿಲ್ಲಾ ಶಸ್ತ್ರಚಿಕಿತ್ಸಕರಾದ ಡಾ.ಹೆಚ್.ವೀಣಾ, ಬೆಂಗಳೂರಿನ ಆರ್.ವಿ.ಕಾಲೇಜು ಪ್ರಾಂಶುಪಾಲರಾದ ಬಿ.ಓ.ಎಸ್.ಅಧ್ಯಕ್ಷರು ಆರ್‌ಜಿಯುಹೆಚ್‌ಎಸ್ ಡಾ.ಎಸ್.ಆರ್. ಗಜೇಂದ್ರಸಿಂಗ್, ಸರ್ಕಾರಿ ಶುಶ್ರೂಷಕರ ಶಾಲೆ ಪ್ರಾಂಶುಪಾಲರು ಗಂಗಮ್ಮ ಅವರುಗಳನ್ನು ಶ್ರೀದೇವಿ ಸಂಸ್ಥೆಯ ವತಿಯಿಂದ ಸನ್ಮಾನಿಸಲಾಯಿತು.

# ಜನತೆಯ ವಿಶ್ವಾಸಾರ್ಹತೆಯೇ ರಾಜಕೀಯ ಪಕ್ಷದ ಸಂಪನ್ಮೂಲ

◀◀ ...ಮೊದಲನೇ ಪುಟದಿಂದ

ಅದೇ ರೀತಿ ಹಿಂದಿನ ಚುನಾವಣೆಯಲ್ಲಿ ಶೇಕಡ 38ರಷ್ಟು ಮತ ಪಡೆದಿದ್ದ ಕಾಂಗ್ರೆಸ್ 43ರಷ್ಟು ಪಡೆದು ತನ್ನ ಮತದಾರ ಪ್ರಮಾಣವನ್ನು ಹಿಗ್ಗಿಸಿಕೊಂಡಿದೆ. ಜೆಡಿಎಸ್ ಆ ಚುನಾವಣೆಯಲ್ಲಿ ಶೇಕಡ 18.36ರಷ್ಟು ಮತ ಗಳಿಸಿತ್ತು. ಈಗ ಶೇಕಡ 13ರಷ್ಟು ಮಾತ್ರ ಮತ ಗಳಿಸಲು ಸಾಧ್ಯವಾಗಿದೆ. ಬಿಜೆಪಿ ಶೇಕಡ 3 ಮತ್ತು ಜೆಡಿಎಸ್ ಶೇಕಡ 5ರಷ್ಟು ತಮ್ಮ ಮತಗಳನ್ನು ಈ ಚುನಾವಣೆಯಲ್ಲಿ ಕಳೆದುಕೊಂಡಿವೆ. ಅದು ಕಾಂಗ್ರೆಸ್ ಮತ್ತು ಇತರರ ಪಾಲಾಗಿದೆ.



ಡಾ.ಜಿ.ಪರಮೇಶ್ವರ
ಮಾನ್ಯ ಸಚಿವರು

ಮತ ಪ್ರಮಾಣದ ಏರುಪೇರುಗಳಿಂದಾಗಿ ಕಳೆದ ವಿಧಾನಸಭಾ ಚುನಾವಣೆಯಲ್ಲಿ 80 ಸ್ಥಾನಗಳಲ್ಲಿದ್ದ ಕಾಂಗ್ರೆಸ್ ಪಕ್ಷ 135+1ಕ್ಕೆ ಜಿಗಿದಿದೆ. 104 ಸ್ಥಾನಗಳನ್ನು ಪಡೆದಿದ್ದ ಬಿಜೆಪಿ 66 ಸ್ಥಾನಗಳಿಗೆ ತೃಪ್ತಿ ಪಟ್ಟುಕೊಳ್ಳಬೇಕಾಗಿದೆ. 37 ಸ್ಥಾನಗಳನ್ನು ಪಡೆದಿದ್ದ ಜೆಡಿಎಸ್ ಪಕ್ಷ 19 ಸ್ಥಾನಗಳನ್ನು ಮಾತ್ರ ಗಳಿಸುವಲ್ಲಿ ಯಶಸ್ವಿಯಾಗಿದೆ.


ನಾನು ಅನೇಕ ಸಂದರ್ಭಗಳಲ್ಲಿ ಬಿಜೆಪಿ ಪಕ್ಷದ ಒಳಗೆ ಮತ್ತು ಹೊರಗೆ ನಮ್ಮ ಪಕ್ಷ ಇತರ ಸಮುದಾದಯಗಳ ವಿಶ್ವಾಸ ಗಳಿಸುವ ಅಗತ್ಯವನ್ನು ಒತ್ತಿ ಹೇಳಿದ್ದೇನೆ. ಬಿಜೆಪಿ ಪಕ್ಷ ಸ್ವತಂತ್ರವಾಗಿ ಅಧಿಕಾರಕ್ಕೆ ಬರಬೇಕಾದರೆ ಅದರ ಮತ ಗಳಿಕೆ ಪ್ರಮಾಣ ಈಗಿನದನ್ನು ಗಣನೆಗೆ ತೆಗೆದುಕೊಂಡರೂ ಶೇಕಡ 10ರಷ್ಟು ಹೆಚ್ಚಿನ ಮತಗಳನ್ನು ಪಡೆಯಬೇಕಾಗಿದೆ. ಆದರೆ ಅದರ ಮತ ಗಳಿಕೆ ಪ್ರಮಾಣ ಇಳಿಮುಖವಾಗುತ್ತಿದೆ. ಅನೇಕ ಸಮುದಾಯಗಳು ಪಕ್ಷದಿಂದ ದೂರ ಸರಿಯುತ್ತಿವೆ. ಇದೊಂದು ಎಚ್ಚರಿಕೆಯ ಘಂಟೆಯೆಂದು ಪಕ್ಷದ ನಾಯಕರು ಚಿಂತಿಸಬೇಕಾಗಿದೆ. ಸಮುದಾಯಗಳು ಪಕ್ಷದಿಂದ ದೂರವಾಗುತ್ತಿರುವುದಕ್ಕೆ ಉದಾಹರಣೆಯೊಂದನ್ನು ನೋಡಬಹುದು. 2022ರಲ್ಲಿ ಬಿಜೆಪಿ ಪಕ್ಷ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಮೀಸಲಾತಿ ಪ್ರಮಾಣ ಶೇಕಡ 18ರಿಂದ 23ಕ್ಕೆ ಹೆಚ್ಚಿಸಲು ಸಚಿವ ಸಂಪುಟದ ನಿರ್ಧಾರ ಮಾಡಿ, ಭಾರತ ಸರ್ಕಾರಕ್ಕೆ ತನ್ನ ಶಿಫಾರಸು ಕಳುಹಿಸಿತ್ತು. ಅದರಲ್ಲಿ ಪರಿಶಿಷ್ಟ ಜಾತಿ ಶೇಕಡ 2ರಷ್ಟು ಮತ್ತು ಪರಿಶಿಷ್ಟವರ್ಗಕ್ಕೆ ಶೇಕಡ 7ರಷ್ಟು ಹೆಚ್ಚು ಮಾಡುವ ನಿರ್ಣಯವನ್ನು ಬಿಜೆಪಿ ಸರ್ಕಾರ ಕೈಗೊಂಡಿತ್ತು. ದುರ್ದೈವದ ವಿಚಾರವೆಂದರೆ ಸರ್ಕಾರದ ಈ ಪ್ರಯತ್ನವನ್ನು ಫಲಾನುಭವಿಯಾಗಿರುವ ಪರಿಶಿಷ್ಟ ವರ್ಗ ಗಣನೆಗೆ ತೆಗೆದುಕೊಳ್ಳದಿರುವುದನ್ನು ಗಮನಿಸಬಹುದು. ಪರಿಶಿಷ್ಟ ವರ್ಗಕ್ಕೆ ಸೇರಿದ 15 ಶಾಸಕರು ವಿಧಾನಸಭೆಗೆ ಆಯ್ಕೆಯಾಗುತ್ತಾರೆ. 2023ರ ಫಲಿತಾಂಶದ ಪ್ರಕಾರ ಪರಿಶಿಷ್ಟವರ್ಗಕ್ಕೆ ಸೇರಿದ 15 ಶಾಸಕರಲ್ಲಿ 14 ಜನ ಕಾಂಗ್ರೆಸ್ ಪಕ್ಷದಿಂದ ಆಯ್ಕೆಯಾಗಿದ್ದಾರೆ. ಒಬ್ಬರೂ ಜೆಡಿಎಸ್ ಪಕ್ಷದಿಂದ ಆಯ್ಕೆಯಾಗಿದ್ದಾರೆ. ಬಿಜೆಪಿಯಿಂದ ಒಬ್ಬರು ಆಯ್ಕೆಯಾಗದಿರುವುದು ಏನನ್ನು ಸೂಚಿಸುತ್ತದೆ. ಅದೇ ರೀತಿ ಪರಿಶಿಷ್ಟ ಜಾತಿಯಲ್ಲೂ ನಿರೀಕ್ಷಿತ ರೀತಿಯಲ್ಲಿ ಶಾಸಕರು ಆಯ್ಕೆಯಾಗಿಲ್ಲ.

ಬಿಜೆಪಿ ಸರ್ಕಾರ ಹೊಸ ಮೀಸಲಾತಿ ನೀತಿಯನ್ನು ಅಳವಡಿಸಿಕೊಂಡು ಲಿಂಗಾಯತ ಮತ್ತು ಒಕ್ಕಲಿಗ ಸಮುದಾಯಗಳಿಗೆ ತಲಾ ಶೇಕಡ 2ರಷ್ಟು ಹೆಚ್ಚಿನ ಮೀಸಲಾತಿಯನ್ನು ನೀಡಿತ್ತು. ಈ ಪ್ರಯತ್ನ ಕೂಡ ಪ್ರಯೋಜನ ತಂದಿಲ್ಲ. ಯಾಕೆ? ಪಕ್ಷದ ನಾಯಕರು ಪೂರ್ವಗ್ರಹ ತೊರೆದು ಆತ್ಮಾವಲೋಕನ ಮಾಡಿಕೊಳ್ಳಬೇಕಾಗಿದೆ. ಪಕ್ಷ ಕೇವಲ ನಾಯಕರು ಮತ್ತು ಧಾರ್ಮಿಕ ವ್ಯಕ್ತಿಗಳಿಂದಲೇ ಬೆಳೆಯುವುದಿಲ್ಲ. ಎಲ್ಲ ಸಮುದಾಯದ ಜನಸಾಮಾನ್ಯರಲ್ಲಿ ಪಕ್ಷದ ವಿಚಾರದಲ್ಲಿ ಸದಭಿಪ್ರಾಯ ಮೂಡಿದರೆ ಮಾತ್ರ ಪಕ್ಷ ತನಗೆ ತಾನಾಗಿಯೇ ಬೆಳೆದು ಮತದಾರರ ವಿಶ್ವಾಸವನ್ನು ಗಳಿಸುತ್ತದೆ. ಯಾವುದೇ ರಾಜಕೀಯ ಪಕ್ಷಕ್ಕೆ ಜನತೆಯ ವಿಶ್ವಾಸಾರ್ಹತೆಯೇ ಪ್ರಮುಖವಾದ ಸಂಪನ್ಮೂಲ. ಬಿಜೆಪಿ ಪಕ್ಷ ಕರ್ನಾಟಕ ಜನತೆ ವಿಶ್ವಾಸವನ್ನು ಕಳೆದುಕೊಂಡಿರುವುದು ಪಕ್ಷದ ವಿಚಾರದಲ್ಲಿ ಪ್ರೀತಿಯುಳ್ಳ ಎಲ್ಲರಿಗೂ ಆಘಾತ ತಂದಿರುವ ಸಂಗತಿ.

2018ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ತುಮಕೂರು ಜಿಲ್ಲೆಯಿಂದ ಐದು ಸ್ಥಾನಗಳನ್ನು ಪಡೆದಿತ್ತು. ಅದರಲ್ಲಿ ಶಿರಾದಲ್ಲಿ ನಡೆದ ಉಪಚುನಾವಣೆಯಲ್ಲೂ ಬಿಜೆಪಿ ಪಕ್ಷ ಗೆದ್ದಿತು. ಈ ಸಲ ಎರಡು ಸ್ಥಾನಗಳಿಗೆ ಇಳಿದಿದೆ. ತುಮಕೂರು ಗ್ರಾಮಾಂತರ ವಿಧಾನಸಭಾ ಕ್ಷೇತ್ರ ಈ ಸಲ ಗೆದ್ದ ಕ್ಷೇತ್ರ. ಅಂದರೆ ಹಿಂದಿನ ಚುನಾವಣೆಗಿಂತ ನಾಲ್ಕುಸ್ಥಾನಗಳನ್ನು ಬಿಜೆಪಿ ಪಕ್ಷ ಕಳೆದುಕೊಂಡಿದೆ. ತುಮಕೂರು ನಗರದ ಕ್ಷೇತ್ರದಿಂದ ಶ್ರೀ ಜ್ಯೋತಿ ಗಣೇಶ್ ಅವರು 59,165 ಮತಗಳನ್ನು ಪಡೆದು ಆಯ್ಕೆಯಾಗಿದ್ದಾರೆ.



ಶ್ರೀ ಜ್ಯೋತಿ ಗಣೇಶ್
ಶಾಸಕರು



ಶ್ರೀ ಬಿ.ಸುರೇಶ್‌ಗೌಡ
ಶಾಸಕರು

ತುಮಕೂರು ಗ್ರಾಮಾಂತರಕ್ಷೇತ್ರದಿಂದ 89.191 ಮತಗಳನ್ನು ಪಡೆದು ಶ್ರೀ ಸುರೇಶ್ ಗೌಡ ಅವರು ಆಯ್ಕೆಯಾಗಿದ್ದಾರೆ. ಅವರಿಬ್ಬರಿಗೂ ವೈಯಕ್ತಿಕವಾಗಿ ನಾನು ಅಭಿನಂದನೆ ಸಲ್ಲಿಸುತ್ತೇನೆ. ಈಗಲೂ ಪಕ್ಷ ನಿಷ್ಪಕ್ಷಪಾತವಾಗಿ ಆತ್ಮಾವಲೋಕನ ಮಾಡಿಕೊಂಡರೆ ಮಾತ್ರ ಮುಂದೆ ಸಕಾರಾತ್ಮಕ ಬೆಳವಣಿಗೆ ಕಾಣಲು ಸಾಧ್ಯ.

ಕರ್ನಾಟಕ ರಾಜ್ಯದ 31ನೆಯ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿರುವ ಶ್ರೀ ಸಿದ್ದರಾಮಯ್ಯ ಅವರು ರಾಜ್ಯದ ಪ್ರಜ್ಞಾವಂತ ಜನರ ಅಭಿಮಾನಕ್ಕೆ ಪಾತ್ರರಾಗಿದ್ದಾರೆ. ಚುನಾವಣಾಪೂರ್ವದಲ್ಲಿ ನಡೆದ ಎಲ್ಲ ಸಮೀಕ್ಷೆಗಳಲ್ಲೂ ಶೇಕಡ 40ರಷ್ಟು ಜನರು 'ಶ್ರೀ ಸಿದ್ದರಾಮಯ್ಯ ಅವರು ರಾಜ್ಯದ ಮುಂದಿನ ಮುಖ್ಯಮಂತ್ರಿಯಾಗಬೇಕು' ಎಂದಿದ್ದರು. ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗುವಂತೆ ಪಶ್ಚಿಮ ಬಂಗಾಳ, ಕೇರಳ, ಮಹಾರಾಷ್ಟ್ರ, ತಮಿಳುನಾಡು ಮೊದಲಾದ ರಾಜ್ಯಗಳ ನಾಯಕರುಗಳು ಒತ್ತಾಯ ಮಾಡಿದ್ದಾರೆ. ಜನಸಮುದಾಯದ ಭಾವನೆಗಳಿಗೆ ಅವರು ಧ್ವನಿಯಾಗಿದ್ದಾರೆ.

1996ರಲ್ಲಿ ಶ್ರೀ ಸಿದ್ದರಾಮಯ್ಯ ಅವರು ನಮ್ಮ ಶ್ರೀದೇವಿ ಆಸ್ಪತ್ರೆಯ ದಶಮಾನೋತ್ಸವ ಸಂದರ್ಭದಲ್ಲಿ ಡಯಾಗ್ನೋಷಿಯನ್ ಸೆಂಟರ್‌ನ ಉದ್ಘಾಟನೆ ಮಾಡಿದ್ದರು. ಆಗ ನಾನು ನನ್ನ ಭಾಷಣದಲ್ಲಿ 'ಕರ್ನಾಟಕ ರಾಜ್ಯದಲ್ಲಿ ಶ್ರೀ ಸಿದ್ದರಾಮಯ್ಯ ಅವರು ಖಂಡಿತ ರಾಜ್ಯದ ಮುಖ್ಯಮಂತ್ರಿಗಳು ಆಗುತ್ತಾರೆ, ಆಗವರು ತುಂಬ ಮಹತ್ವದ ಅಭಿವೃದ್ಧಿ ಕೆಲಸ ಮಾಡುತ್ತಾರೆ' ಎಂದಿದ್ದೆ. ಆಗ ಯಾರೂ ಅವರನ್ನು ಮುಖ್ಯಮಂತ್ರಿ ಅಭ್ಯರ್ಥಿ ಎಂದು ಪರಿಗಣಿಸಿರಲಿಲ್ಲ.



ಮಧುಗಿರಿ ಸಾಮಾನ್ಯ
ಕ್ಷೇತ್ರದಿಂದ ಶಾಸಕರಾಗಿ
ಆಯ್ಕೆಯಾದ ಹಿಂದುಳಿದ
ವರ್ಗದ ನಾಯಕ
ಕೆ.ಎನ್.ರಾಜಣ್ಣ

ಶ್ರೀ ಸಿದ್ದರಾಮಯ್ಯ ಅವರ ಬದುಕು ಸ್ವಾತಂತ್ರ್ಯ ಬಂದ ತರುಣದಲ್ಲಿ ಹುಟ್ಟಿದ ಎಲ್ಲ ಹಿಂದುಳಿದ ಮತ್ತು ಬಡಕುಟುಂಬಗಳನ್ನು ಪ್ರತಿನಿಧಿಸುವ ಸಾಹಸಶೀಲ ವ್ಯಕ್ತಿಯ ಬದುಕಾಗಿದೆ. ಆ ಕಾಲದಲ್ಲಿ ಈ ವರ್ಗಕ್ಕೆ ಸೇರಿದ ತಂದೆ, ತಾಯಿಗಳಿಗೆ ಮಕ್ಕಳಿಗೆ ಶಿಕ್ಷಣ ಕೊಡಿಸಬೇಕು ಎಂಬ ಮಹತ್ವದ ಆಸೆಯಿರಲಿಲ್ಲ. ಮಕ್ಕಳು ಓದಿದರೆ ಅವರು ಬೇಡ ಎನ್ನುತ್ತಿರಲಿಲ್ಲ. ಶ್ರೀ ಸಿದ್ದರಾಮಯ್ಯ ಅವರಿಗೂ ರಾಜಪ್ಪ ಮಾಸ್ತರ ಅವರೇ ವ್ಯಾಸಂಗಕ್ಕೆ ಬುನಾದಿ ಹಾಕಿದವರು. ಸಿದ್ದರಾಮಯ್ಯ ಅವರಿಗೆ ಬಾಲ್ಯದಿಂದಲೂ ಜಾನಪದ ನೃತ್ಯಗಳಾದ ವೀರಮಕ್ಕಳ ಕುಣಿತ, ವೀರಗಾಸೆ, ಡೊಳ್ಳು ಕುಣಿತಗಳು ಅಚ್ಚುಮೆಚ್ಚಿನ ಸಂಗತಿಗಳಾಗಿದ್ದವು. ಅವುಗಳ ಮೇಲಿನ ಪ್ರೀತಿ ಇಂದಿಗೂ ಅವರಲ್ಲಿದೆ. ಶಿಕ್ಷಣದಲ್ಲೂ ಅವರಿಗೆ ಸಮಾನ ಆಸಕ್ತಿ. ಬಿ.ಎಸ್‌ಸಿ. ಮತ್ತು ಎಲ್.ಎಲ್.ಬಿ. ಪದವಿಯನ್ನು ಪಡೆದು ವಕೀಲ ವೃತ್ತಿ ಸಹ ಮಾಡುತ್ತಾರೆ. ಆ ಸಮಯದಲ್ಲೇ ಅವರಿಗೆ ರೈತ ಹೋರಾಟಗಾರರಾದ ಪ್ರೊ.ಎಂ.ಡಿ. ನಂಜುಂಡಸ್ವಾಮಿ ಅವರ ಪರಿಚಯವಾಗುತ್ತದೆ. ಅಲ್ಲಿಂದಲೇ ಸಾರ್ವಜನಿಕಕ್ಷೇತ್ರಕ್ಕೆ ಪ್ರವೇಶ. 1978ರಲ್ಲಿ ತಾಲ್ಲೂಕು ಅಭಿವೃದ್ಧಿ ಮಂಡಲಿ ಸದಸ್ಯರು. 1983ರಲ್ಲಿ ಮುಖ್ಯಮಂತ್ರಿಗಳಾಗಿದ್ದ ಡಿ.ದೇವರಾಜ ಅರಸು ಅವರ ತಮ್ಮ ಡಿ.ಜಯದೇವರಾಜ ಅರಸು ಅವರನ್ನು ಸೋಲಿಸಿ ಭಾರತೀಯ ಲೋಕದಳದಿಂದ ಕರ್ನಾಟಕ ವಿಧಾನಸಭೆಯನ್ನು ಪ್ರವೇಶ ಮಾಡುತ್ತಾರೆ. ಕರ್ನಾಟಕದಲ್ಲಿ ಮೊದಲ ಬಾರಿಗೆ ಕಾಂಗ್ರೇಸೇತರ ಸರ್ಕಾರ ಸ್ಥಾಪನೆಯಲ್ಲಿ ಸಿದ್ದರಾಮಯ್ಯ ಅವರ ಕೊಡುಗೆ ಇದೆ. ಆಗವರು ಪಕ್ಷೇತರ ಶಾಸಕರು ಎಂದು ಗುರುತಿಸಲ್ಪಟ್ಟಿದ್ದರು. ಅಂದಿನ ಎಲ್ಲ ಪಕ್ಷೇತರ ಶಾಸಕರು ಶ್ರೀ ರಾಮಕೃಷ್ಣ ಹೆಗಡೆ ಅವರ ಸರ್ಕಾರಕ್ಕೆ ಬೆಂಬಲ ಕೊಟ್ಟಿದ್ದರು. ಆಗ ಸಿದ್ದರಾಮಯ್ಯ ಅವರು ಕನ್ನಡ ಕಾವಲು ಸಮಿತಿ ಅಧ್ಯಕ್ಷರಾಗಿ ಅಂದಿನ ಸರ್ಕಾರ ಗಡಿ ಅಭಿವೃದ್ಧಿ ಮತ್ತು ಕನ್ನಡ ಭಾಷೆಯನ್ನು ಆಡಳಿತ ಭಾಷೆಯಾಗಿ ಮಾಡಲು ಉತ್ತಮ ವರದಿಗಳನ್ನು ಕೊಟ್ಟಿದ್ದರು. ನಂತರ ಎಸ್.ಆರ್.ಬೊಮ್ಮಾಯಿ, ಎಚ್.ಡಿ.ದೇವೇಗೌಡ, ಜೆ.ಎಚ್.ಪಟೇಲ್ ಮತ್ತು ಎನ್.ಧರ್ಮಸಿಂಗ್ ಅವರ ಸರ್ಕಾರದಲ್ಲಿ ಮಂತ್ರಿ ಮತ್ತು ಉಪಮುಖ್ಯಮಂತ್ರಿಗಳಾಗಿ ಕರ್ತವ್ಯ ನಿರ್ವಹಿಸಿದ್ದಾರೆ. ಎರಡು ಸಲ ರಾಜ್ಯದ ವಿರೋಧ ಪಕ್ಷದ ನಾಯಕರಾಗಿ ಕೆಲಸ ಮಾಡಿದ್ದಾರೆ. 2013ರಲ್ಲಿ ಕಾಂಗ್ರೆಸ್‌ಗೆ ಬಹುಮತ ತಂದುಕೊಡುವುದರ ಮೂಲಕ ಮೊದಲ ಸಲ ಮುಖ್ಯಮಂತ್ರಿಗಳಾಗಿದ್ದರು. ಅದು 2023ರಲ್ಲೂ ಪುನರಾವರ್ತನೆಯಾಗಿದೆ. ಎರಡು ಸಂದರ್ಭಗಳಲ್ಲೂ ಹೋರಾಟ ಮತ್ತು ಜನಜಾಗೃತಿಯಿಂದ ಸಿದ್ದರಾಮಯ್ಯ ಅವರು ಅಧಿಕಾರ ಪಡೆದಿದ್ದಾರೆ. ಈ ಸಲ ಅವರ ಜೊತೆ ಕೆಪಿಸಿಸಿ ಅಧ್ಯಕ್ಷರಾದ ಶ್ರೀ ಡಿ.ಕೆ.ಶಿವಕುಮಾರ್ ಅವರು ಸಾಥ್ ನೀಡಿದ್ದಾರೆ. ಮೊದಲ ಸಲ ಮುಖ್ಯಮಂತ್ರಿಯಾಗಿದ್ದಾಗ ಅನ್ನಭಾಗ್ಯ, ಕ್ಷೀರಭಾಗ್ಯ ಮತ್ತು ಇಂದಿರಾ ಕ್ಯಾಂಟೀನ್‌ನಂತಹ ಜನಪ್ರಿಯ ಯೋಜನೆಗಳನ್ನು ಅನುಷ್ಠಾನಗೊಳಿಸಿದ್ದರು. ಈಗಾಗಲೇ ಹೇಳಿದ್ದ ಐದು ಗ್ಯಾರಂಟಿಗಳ ಬಗ್ಗೆ ಸಚಿವ ಸಂಪುಟದಲ್ಲಿ ಒಪ್ಪಿಗೆ ಪಡೆದಿದ್ದಾರೆ.

ಇದೊಂದು ಸುದೀರ್ಘ ಪ್ರಯಾಣ. ಈಗ ನಡಿಗೆ ಪ್ರಾರಂಭವಾಗಿದೆ. ನಡಿಗೆಯಲ್ಲಿ ಅನೇಕ ತೊಂದರೆ ಮತ್ತು ಸವಾಲುಗಳು ಬರಬಹುದು. ದೃಢನಿರ್ಧಾರ, ಸತತ ಪ್ರಯತ್ನ, ಎಲ್ಲರ ವಿಶ್ವಾಸ ಗಳಿಕೆ ಮತ್ತು ತಲುಪಬೇಕಾದ ಸ್ಥಳದ ಬಗ್ಗೆ ಸ್ಪಷ್ಟ ಕಲ್ಪನೆಯಿದ್ದರೆ ಖಂಡಿತ ಗುರಿ ಮುಟ್ಟುತ್ತೇವೆ. ಈ ಸಂದರ್ಭದಲ್ಲಿ ರಾಷ್ಟ್ರಕವಿ ಕುವೆಂಪು ಅವರು 'ವಿಚಾರಕ್ರಾಂತಿಗೆ ಆಹ್ವಾನ' ಗ್ರಂಥದಲ್ಲಿ ಹೇಳಿರುವ ಮಾತುಗಳನ್ನು ಜ್ಞಾಪಿಸಿಕೊಳ್ಳುತ್ತೇನೆ. "ನಿಜವಾದ ಪ್ರಜಾಪ್ರಭುತ್ವ ಎಂದರೆ ವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆ ತಾರದೆ ಎಲ್ಲರನ್ನೂ ಜೊತೆಯಲ್ಲಿ ಕರೆದುಕೊಂಡು ಹೋಗುವ, ಪ್ರಜೆಗಳಿಂದ ಆಯ್ಕೆಯಾದ ಪ್ರಾಮಾಣಿಕ ವ್ಯಕ್ತಿಗಳು ರಾಷ್ಟ್ರದ ಅಭ್ಯುದಯಕ್ಕೆ ನಡೆಸುವ ರಾಜ್ಯಭಾರ". ಈ ಆದರ್ಶವೂ ಶ್ರೀ ಸಿದ್ದರಾಮಯ್ಯ ನೇತೃತ್ವದ ಸರ್ಕಾರದ ಗುರಿಯಾಗಿರಲಿ.

# ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಶ್ರೀದೇವಿ ವಿದ್ಯಾಮಂದಿರದ ವಿದ್ಯಾರ್ಥಿಗಳ ಉತ್ತಮ ಸಾಧನೆ

◀◀ ...ಮೊದಲನೇ ಪುಟದಿಂದ

**ನಮ್ಮ ಶಾಲೆಯ ಸಾಕಾರಾತ್ಮಕವಾದ ಅಂಶಗಳು**

- ಈ ಶಾಲೆಯ ವಿದ್ಯಾರ್ಥಿಗಳು, ಆಶುಭಾಷಣ, ಚರ್ಚಾಸ್ಪರ್ಧೆ, ಯೋಗಶಿಕ್ಷಣ, ಫುಟ್‌ಬಾಲ್, ಕ್ರೀಡೆಗಳಲ್ಲಿ ಜಿಲ್ಲೆ, ರಾಜ್ಯ ಮಟ್ಟದವರೆಗೂ ಗೆಲುವಿನ ಸಾಧನೆಗೈದಿದ್ದಾರೆ.
- 2012–13, 2014–15, 2018–19 ಮತ್ತು 2020–21ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಶೇ.100 ಫಲಿತಾಂಶ ಬಂದಿದೆ. ಪ್ರಸ್ತುತ 2022–23ನೇ ಸಾಲಿನಲ್ಲಿ ಶೇ.83.33 ಫಲಿತಾಂಶ ಬಂದಿದೆ.
- ಈ ಶಾಲೆಯ ವಾರ್ಷಿಕೋತ್ಸವ ಸಮಾರಂಭಕ್ಕೆ ಸಾಹಿತಿಗಳಾದ ಡಾ.ಚಿಕ್ಕಣ್ಣ ಯಣ್ಣೇಕಟ್ಟೆ, ಡಾ.ಗಂಗಾಧರ ಕೊಡ್ಲಿಯವರ್ ಮತ್ತು ಸಾರ್ವಜನಿಕ ಶಿಕ್ಷಣ ಇಲಾಖೆಯ ದೈಹಿಕ ಶಿಕ್ಷಣದ ನಿರ್ದೇಶಕರಾದ ಶಿವಕುಮಾರ ಮತ್ತು ಗಣ್ಯ ವ್ಯಕ್ತಿಗಳಾದ ಡಾ.ನವೀನ್ ಕುಮಾರ್ ಹಾಗೂ ಡಾ.ಚಿತ್ರಲಿಂಗಯ್ಯ ಅವರು ಪಾಲ್ಗೊಂಡಿದ್ದಾರೆ.
- ವರ್ಷವೂ ನಡೆಯುವ ರಾಷ್ಟ್ರೀಯ ಹಬ್ಬಗಳಲ್ಲಿ ಪ್ರತಿಭಾವಂತರನ್ನು ಶಾಲೆಯ ಪರವಾಗಿ ಸನ್ಮಾನಿಸಲಾಗುತ್ತಿದೆ. 2020ರಲ್ಲಿ ಪದ್ಮಶ್ರೀ ಪುರಸ್ಕೃತರಾದ ಹರೇಕಳ ಹಾಜಬ್ಬರವರನ್ನು ಸಂಸ್ಥೆ 2012ರಲ್ಲಿಯೇ ಗುರುತಿಸಿ ಸನ್ಮಾನಿಸಿದೆ.
- ಪ್ರತಿ ವರ್ಷವೂ ವಾಲ್ಮೀಕಿ ಜಯಂತಿ, ಕನಕದಾಸರ ಜಯಂತಿ, ಸ್ವಾಮಿ ವಿವೇಕಾನಂದರ ಜಯಂತಿ, ರಾಷ್ಟ್ರಕವಿ ಕುವೆಂಪು, ಡಾ.ಸರ್ವಪಲ್ಲಿ ರಾಧಾಕೃಷ್ಣನ್, ಸರ್.ಸಿ.ವಿ.ರಾಮನ್, ಸರ್.ಎಂ.ವಿಶ್ವೇಶ್ವರಯ್ಯ, ನೆಹರೂ ಜಯಂತಿ, ವಿವಿಧ ಜಯಂತಿಗಳನ್ನು ಆಚರಿಸುವುದರ ಮೂಲಕ ವಿದ್ಯಾರ್ಥಿಗಳಿಗೆ ಅವರ ವ್ಯಕ್ತಿತ್ವವನ್ನು ಮನವರಿಕೆ ಮಾಡಿಕೊಡಲಾಗುತ್ತಿದೆ.

ಡಾ. ಎಂ.ಆರ್.ಹುಲಿನಾಯ್ಕರ್ ಮತ್ತು ಶ್ರೀಮತಿ ಶಾಂತಾದುರ್ಗಾದೇವಿ ಹುಲಿನಾಯ್ಕರ್ ಅವರಿಗೆ ಉನ್ನತ ಶಿಕ್ಷಣದಷ್ಟೇ ಶಾಲಾ ಶಿಕ್ಷಣವೂ ಪ್ರಿಯವಾಗಿದೆ. ಇಲ್ಲಿ ಆರ್ಥಿಕವಾಗಿ ದುರ್ಬಲರು ಮತ್ತು ಗ್ರಾಮೀಣ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಲೇಬೇಕು ಎಂಬ ಸಂಕಲ್ಪ ಅವರಲ್ಲಿದೆ. ಅದನ್ನು ಶ್ರದ್ಧೆ ಮತ್ತು ನಿಷ್ಠೆಯಿಂದ ನಮ್ಮ ಕರ್ತವ್ಯ ನಿರ್ವಹಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ.



ಶಾಲಾ ವಾರ್ಷಿಕೋತ್ಸವ ಉದ್ಘಾಟನಾ ಸಂದರ್ಭದಲ್ಲಿ ಶ್ರೀ ಡಾ.ಎಂ.ಆರ್.ಹುಲಿನಾಯ್ಕರ್, ಡಾ. ಮನೋನ್ಮಣಿ, ಡಾ. ಗಂಗಾಧರ್ ಕೊಡ್ಲಿಯವರ್ ಮತ್ತು ಮುಖ್ಯ ಅತಿಥಿಗಳಾದ ಡಾ.ಚಿಕ್ಕಣ್ಣ ಯಣ್ಣೇಕಟ್ಟೆ,

## ಶ್ರೀದೇವಿ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ವತಿಯಿಂದ

# ವೈದ್ಯಕೀಯ ಕೋರ್ಸ್ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ



"ಮಾತೃ ದೇವೋಭವ ಪಿತೃ ದೇವೋಭವ ಆಚಾರ್ಯ ದೇವೋಭವ ಅತಿಥಿ ದೇವೋಭವ ಎಂದು ಹೇಳುವ ಮೂಲಕ ಹೆತ್ತವರು, ಹಿರಿಯರು, ಗುರುಗಳು, ಅತಿಥಿಗಳನ್ನು ಗೌರವಿಸಬೇಕು ಎಂಬ ಸಂದೇಶವನ್ನು ವಿಶ್ವಕ್ಕೆ ಸಾರಿದ್ದು ಭಾರತೀಯ ಸಂಸ್ಕೃತಿ. ನಾವು ಸಮಾಜದಲ್ಲಿ ಮಾತೃ, ಪಿತೃ, ಗುರು ಹಾಗೂ ವೈದ್ಯರಲ್ಲಿ ದೇವರನ್ನು ಕಾಣುತ್ತೇವೆ. ಐದು ವರ್ಷಗಳ ನಿರಂತರ ಶಿಕ್ಷಣ ಮುಗಿಸಿ ವೈದ್ಯ ಪ್ರಶಸ್ತಿ ಸ್ವೀಕರಿಸುತ್ತಿರುವ ಯುವ ವೈದ್ಯಕೀಯ ವಿದ್ಯಾರ್ಥಿಗಳು ಉತ್ತಮ ಕನಸು ಕಾಣಬೇಕು, ಕನಸು ಕಾಣಲಾರದ ವ್ಯಕ್ತಿ ಭವಿಷ್ಯ ರೂಪಿಸಲು ಸಾಧ್ಯವಿಲ್ಲ. ನಿಮ್ಮ ಭವಿಷ್ಯ ಉಜ್ವಲವಾಗಿ ರೂಪಿಸಿಕೊಳ್ಳಲು ವೈದ್ಯವೃತ್ತಿ ಶ್ರೇಷ್ಠ ವೃತ್ತಿಯಾಗಿದೆ. ನಿಮ್ಮಲ್ಲಿಗೆ ಬರುವ ರೋಗಿಗಳಲ್ಲಿ ನೀವು ದೇವರನ್ನು ಕಾಣಬೇಕು, ಉತ್ತಮ ಚಿಕಿತ್ಸೆ ನೀಡಬೇಕು. ವೈದ್ಯರು ಸಾರ್ವಜನಿಕರ ಆರೋಗ್ಯದ ರಕ್ಷಣೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕು. ವೈದ್ಯರು ಮಾತಿನಲ್ಲಿಯೇ ರೋಗಿಗೆ ಅರ್ಧ ಕಾಯಿಲೆಯನ್ನು ಗುಣಪಡಿಸಬಹುದು. ಜೊತೆಗೆ ತಾವು ಉತ್ತಮ ಮನುಷ್ಯನಾಗಿ ಹೊರ ಹೊಮ್ಮಬೇಕು. ರೋಗಿಗಳಿಗೆ ನಗುಮುಖದ ಜೊತೆ ಕರುಣೆಯಿಂದ ಚಿಕಿತ್ಸೆ ನೀಡಿದಲ್ಲಿ ಅವರ ಪಾಲಿಗೆ ವೈದ್ಯರು ದೇವರಾಗುತ್ತಾರೆ. ರೋಗಿಯ ಜೊತೆ ಅವರ ಮಾತೃಭಾಷೆಯಲ್ಲಿಯೇ ವ್ಯವಹರಿಸಿದಲ್ಲಿ ಹೆಚ್ಚು ಅನುಕೂಲಕರವಾಗಿರುತ್ತದೆ. ಯುವವೈದ್ಯರು ಸಂವೇದನಾಶೀಲತೆ, ಮಾನವೀಯತೆಯ ಗುಣಗಳನ್ನು ಬೆಳೆಸಿಕೊಳ್ಳಬೇಕು" ಎಂದು ಬೆಂಗಳೂರಿನ ರಾಮಯ್ಯ ಅಪ್ಲೈಡ್ ಸೈನ್ಸಸ್ ವಿಶ್ವವಿದ್ಯಾಲರುದ ಕುಲಪತಿಗಳು ಹಾಗೂ ಗೋಕುಲ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷರಾದ ಡಾ.ಎಂ.ಆರ್.ಜಯರಾಮ್ ಆವರು ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಆಸ್ಪತ್ರೆಯ ವತಿಯಿಂದ ಮೇ 11ರಂದು ಶ್ರೀದೇವಿ ಕ್ಯಾಂಪಸ್‌ನ ಆವರಣದಲ್ಲಿ, ವೈದ್ಯ ಪದವಿ ಪಡೆದಿರುವ ಐದನೇ ಬ್ಯಾಚ್‌ನ (2017)ನೇ ಪದವಿ ಪ್ರದಾನ ಸಮಾರಂಭದಲ್ಲಿ ಪ್ರಧಾನ ಭಾಷಣ ಮಾಡುತ್ತಾ ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷರಾದ ಡಾ.ಎಂ.ಆರ್. ಹುಲಿನಾಯ್ಕರ್‌ರವರು ಮಾತನಾಡುತ್ತಾ "ಇಂದು ಪದವಿ ಪಡೆದಿರುವ 2017ನೇ ಐದನೇ ಬ್ಯಾಚ್‌ನ ವೈದ್ಯಕೀಯ ವಿದ್ಯಾರ್ಥಿಗಳು 12 ರ್‍ಯಾಂಕ್‌ಗಳನ್ನು ಪಡೆದಿದ್ದಾರೆ, 147 ವಿದ್ಯಾರ್ಥಿಗಳು ವೈದ್ಯಕೀಯ ಪದವಿಯನ್ನು ಪಡೆದಿರುವುದು ತುಂಬಾ ಹರ್ಷ ತಂದಿದೆ. ಪದವಿ ಪಡೆದ ವೈದ್ಯ ವಿದ್ಯಾರ್ಥಿಗಳು ತಾವು ಓದಿದ ಕಾಲೇಜುನ್ನು ಸ್ಮರಿಸಬೇಕು. ಇಂದಿಗೂ ನಾನು ಎಂಬಿಬಿಎಸ್ ವ್ಯಾಸಂಗ ಮಾಡಿದ ಹುಬ್ಬಳ್ಳಿಯ ಕೆ.ಎಂ.ಸಿ. ಕಾಲೇಜನ್ನು ಸ್ಮರಿಸುತ್ತೇನೆ. ನೀವುಗಳು ಉನ್ನತ ವ್ಯಾಸಂಗ ಮಾಡಿ, ತಂದೆ– ತಾಯಿಯವರಿಗೆ ಮತ್ತು ಸಮಾಜಕ್ಕೆ ಉತ್ತಮ ಕೊಡುಗೆ ಕೊಡಬೇಕು. ಈ ಸಂಸ್ಥೆಯಲ್ಲಿ ವ್ಯಾಸಂಗ ಮಾಡಿದ ನಿಮ್ಮ ವೈದ್ಯಕೀಯ ಜ್ಞಾನ ಜನಸಾಮಾನ್ಯರಿಗೆ ಮುಟ್ಟಬೇಕು, ಬಡರೋಗಿಗಳಿಗೆ ಅನುಕೂಲವಾಗುವ ರೀತಿಯಲ್ಲಿ ವೈದ್ಯರು ವರ್ತಿಸಬೇಕು, ಪ್ರತಿಯೊಬ್ಬ ರೋಗಿಯನ್ನು ಆತ್ಮವಿಶ್ವಾಸದಿಂದ, ಪ್ರೀತಿಯಿಂದ, ಕರುಣೆಯಿಂದ ರೋಗಿಗಳನ್ನು ಉಪಚರಿಸಬೇಕು. ವಯೋವೃದ್ಧರನ್ನು ದೇವರಂತೆ ಕಾಣಬೇಕು ಹಾಗೂ ಗುಣಾತ್ಮಕ ಚಿಕಿತ್ಸೆಯನ್ನು ನೀಡಬೇಕು" ಎಂದರು.

ಇದೇ ಸಂದರ್ಭದಲ್ಲಿ ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯದ ನಿದೇಶಕರಾದ ಡಾ.ರಮಣ್ ಆರ್ ಹುಲಿನಾಯ್ಕರ್‌ರವರು ವೈದ್ಯ ವಿದ್ಯಾರ್ಥಿಗಳಿಗೆ ಪ್ರತಿಜ್ಞಾ ವಿಧಿಯನ್ನು ಬೋಧಿಸುತ್ತಾ "ವೈದ್ಯಕೀಯ ವಿದ್ಯಾರ್ಥಿಗಳು ಕೆಲವು ನೀತಿ, ನಿಯಮಗಳನ್ನು ಅನುಸರಿಸಬೇಕಾಗುತ್ತದೆ. ನಮ್ಮ ರಾಜ್ಯದಲ್ಲಿ ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯದ ಅಡಿಯಲ್ಲಿ ಪಠ್ಯಕ್ರಮ ರೂಪಿತವಾಗಿದೆ. ತರಗತಿಗಳಿಗೆ ಕಡ್ಡಾಯವಾಗಿ ಹಾಜರಾಗುವುದರ ಉಪಯೋಗವನ್ನು ವಿದ್ಯಾರ್ಥಿಗಳು ತಿಳಿದುಕೊಳ್ಳಬೇಕು. ಯಶಸ್ವಿ ವೈದ್ಯನಾಗಬೇಕಾದರೆ ಧ್ಯೇಯ ಮತ್ತು ಗುರಿಯಿರುವುದು ಅಗತ್ಯವಾಗಿದೆ. ಶಿಸ್ತಿನಿಂದ ದಿನದ 24 ಗಂಟೆ ಶ್ರೀದೇವಿ ಸಂಸ್ಥೆ ಕಾರ್ಯನಿರ್ವಹಣೆ ಮಾಡುತ್ತದೆ. ವೈದ್ಯರು ನಾಯಕತ್ವ ಗುಣಗಳನ್ನು ಬೆಳೆಸಿಕೊಳ್ಳುವ ಅಗತ್ಯವಿದೆ" ಎಂದರು.

ಇದೇ ಸಂದರ್ಭದಲ್ಲಿ, ಮಾನವ ಸಂಪನ್ಮೂಲ ವಿಭಾಗದ ನಿರ್ದೇಶಕರಾದ ಎಂ.ಎಸ್.ಪಾಟೀಲ್ ಆವರು "ವೈದ್ಯವೃತ್ತಿ ಎಂಬುದು ಬೇರೆ ಉದ್ಯೋಗಗಳಿಗೆ ಹೋಲಿಸಿದಾಗ, ಅತ್ಯಮೂಲ್ಯ ವೃತ್ತಿಯಾಗಿರುತ್ತದೆ. ಆರೋಗ್ಯವಂತ ವ್ಯಕ್ತಿ ಮಾತ್ರ ಆರೋಗ್ಯವಂತ ಸಮಾಜವನ್ನು ನಿರ್ಮಿಸಲು ಸಾಧ್ಯ. ಪ್ರತಿಯೊಬ್ಬ ವ್ಯಕ್ತಿಯೂ ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಲು ವಿಶೇಷ ಕಾಳಜಿಯನ್ನು ವಹಿಸಬೇಕು. ಸಾರ್ವಜನಿಕರ ಆರೋಗ್ಯ ಸಮಸ್ಯೆಗಳು ಬೃಹದಾಕಾರವಾಗಿ ಬೆಳೆಯುತ್ತಿವೆ. ಇದನ್ನು ತಡೆಗಟ್ಟುವಲ್ಲಿ ತಮ್ಮಗಳ ಪಾತ್ರ ಅತಿಮುಖ್ಯವಾಗಿರುತ್ತದೆ"ಎಂದರು. ಕಾರ್ಯಕ್ರಮದ ಪ್ರಾರಂಭದಲ್ಲಿ ಡಾ.ಶೃತಿರವರು ಪ್ರಾರ್ಥಿಸಿದರು, ಡಾ.ಹರೇಂದ್ರಕುಮಾರ್ ಅವರು ಸ್ವಾಗತಿಸಿದರು, ಡಾ.ಸೌಮ್ಯರವರು ವಂದಿಸಿದರು.

■ ವರದಿ: ಎನ್.ಆನಂದ

## ಶ್ರೀದೇವಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಅಂತಾರಾಷ್ಟ್ರೀಯ ಸಮ್ಮೇಳನ ಮತ್ತು ಕಾರ್ಯಾಗಾರ




ಮೆಲ್ಬರ್ನ್ ವಿಶ್ವವಿದ್ಯಾಲಯದ ಕಂಪ್ಯೂಟಿಂಗ್ ಮತ್ತು ಇನ್‌ಫರ್ಮೇಷನ್ ಸಿಸ್ಟಮ್ಸ್ ವಿಭಾಗದ ಪ್ರೊಫೆಸರ್ ಡಾ.ರಾಜ್‌ಕುಮಾರ್ ಬುಯ್ಯ, ಪ್ರೊ.ಡಾ.ಎಸ್.ಕೆ.ಘೋಷ್, ಡಾ.ಸತೀಶ್‌ಶ್ರೀರಾಮ್, ಡಾ.ಡಿ.ಎಲ್. ಮಹಾಬಲೇಶ್ವರ್, ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ಮುಖ್ಯಸ್ಥರಾದ ಡಾ.ಎಂ.ಆರ್.ಹುಲಿನಾಯ್ಕರ್, ಮಾನವ ಸಂಪನ್ಮೂಲ ವಿಭಾಗದ ನಿರ್ದೇಶಕರಾದ ಎಂ.ಎಸ್.ಪಾಟೀಲ್, ಶ್ರೀದೇವಿ ವೈದ್ಯಕೀಯ ವಿದ್ಯಾಸಂಸ್ಥೆಯ ನಿರ್ದೇಶಕರಾದ ಡಾ.ರಮಣ್ ಎಂ ಹುಲಿನಾಯ್ಕರ್, ಪ್ರಾಂಶುಪಾಲರಾದ ಡಾ.ನರೇಂದ್ರ ವಿಶ್ವನಾಥ್ ಡಾ.ಸಿ.ನಾಗರಾಜ್, ಡಾ.ದಿನೇಶ್ ಮುಂತಾದವರು ಉಪಸ್ಥಿತರಿದ್ದರು.

"21ನೇ ಶತಮಾನದ ಅದ್ಭುತ ಸಾಧನೆಗಳಲ್ಲೊಂದಾಗಿರುವ ಇಂಟರ್‌ನೆಟ್ ಆಫ್ ಥಿಂಗ್ಸ್ ಹಲವಾರು ವರ್ಷಗಳಿಂದಲೂ ಅಸ್ತಿತ್ವದಲ್ಲಿದ್ದು, ಇತ್ತೀಚೆಗೆ ವೇಗೋತ್ಕರ್ಷ ಪಡೆದುಕೊಂಡಿದೆ. ಜನಜೀವನದ ಪ್ರತಿಯೊಂದು ಕ್ಷೇತ್ರಗಳಲ್ಲೂ ಅಂದರೆ ಅಡುಗೆಮನೆಯಿಂದ ಹಿಡಿದು ಕಾರು, ಕಡಿಮೆ ವೆಚ್ಚದ ವಸತಿ ನಿರ್ಮಾಣ, ಕಡಿಮೆ ವಿದ್ಯುಚ್ಛಕ್ತಿ ಬಳಕೆ, ತ್ವರಿತ ಸಂಪರ್ಕ ಸಾಧಿಸುವಿಕೆ, ಕೃತಕ ಬುದ್ಧಿಮತ್ತೆಯ ವಿಸ್ತರಣೆಯಂತಹ ಹಲವಾರು ಕ್ಷೇತ್ರಗಳಲ್ಲಿ ತನ್ನದೇ ಆದ ಛಾಪು ಮೂಡಿಸಿ ಜನಜೀವನವನ್ನು ಸುಲಭ ಮತ್ತು ಸುಗಮಗೊಳಿಸುವ ಹಾರ್ಡ್‌ವೇರ್ ಮತ್ತು ಸಾಫ್ಟ್‌ವೇರ್‌ಗಳ ಸಂಯೋಜಿತ ತಂತ್ರಜ್ಞಾನ ಇಂಟರ್‌ನೆಟ್ ಆಗಿದೆ. ಇಂದು ಇಂಟರ್‌ನೆಟ್ ಇಲ್ಲದೆ ಬದುಕಲು ಸಾಧ್ಯವಿಲ್ಲ ಎನ್ನುವ ವಾತಾವರಣ ನಿರ್ಮಾಣವಾಗಿದೆ" ಎಂದು ಮೆಲ್ಬರ್ನ್ ವಿಶ್ವವಿದ್ಯಾಲಯದ ಕಂಪ್ಯೂಟಿಂಗ್ ಮತ್ತು ಇನ್‌ಫರ್ಮೇಷನ್ ಸಿಸ್ಟಮ್ಸ್ ವಿಭಾಗದ ಪ್ರಾಧ್ಯಾಪಕರಾದ ಡಾ.ರಾಜ್‌ಕುಮಾರ್ ಬುಯ್ಯ ಅವರು ಅಭಿಪ್ರಾಯಪಟ್ಟರು.

ಶ್ರೀದೇವಿ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಆಯೋಜಿಸಿರುವ ಎರಡು ದಿನಗಳ ಐ.ಸಿ.ಕ್ಯೂಬ್ ಇಂಟರ್ ನ್ಯಾಷನಲ್ ಕಾನ್‌ಫರೆನ್ಸ್ ಆನ್ ಇಂಟರ್‌ನೆಟ್ ಆಫ್ ಥಿಂಗ್ಸ್, ಕಮ್ಯೂನಿಕೇಷನ್, ಇಂಟಲಿಜೆನ್ಸ್ ಮತ್ತು ಕಂಪ್ಯೂಟಿಂಗ್ ಹಾಗೂ ಕ್ಲೌಡ್ ಮತ್ತು ಎಡ್ಜ್ ಕಂಪ್ಯೂಟಿಂಗ್ ಕಾರ್ಯಾಗಾರವು ಮೇ 5ರಂದು ಜರುಗಿತು. ಶ್ರೀಯುತರು ಅಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು.

ಸಮಾವೇಶದಲ್ಲಿ ಗೌರವಾನ್ವಿತ ಅತಿಥಿಗಳಾಗಿ ಭಾಗವಹಿಸಿದ್ದ ಖರಗ್‌ಪುರ ಐಐಟಿಯ ಕಂಪ್ಯೂಟರ್ ಸೈನ್ಸ್ ವಿಭಾಗದ ಪ್ರೊ.ಡಾ.ಎಸ್.ಕೆ.ಘೋಷ್, ಹೈದರಾಬಾದ್ ವಿಶ್ವವಿದ್ಯಾಲಯದ ಕಂಪ್ಯೂಟಿಂಗ್ ಮತ್ತು ಮ್ಯಾನೇಜ್‌ಮೆಂಟ್ ವಿಭಾಗದ ಡಾ.ಸತೀಶ್ ಶ್ರೀರಾಮ್ ಮತ್ತು ಬಾಗಲಕೋಟೆಯ ತೋಟಗಾರಿಕಾ ವಿಶ್ವವಿದ್ಯಾಲಯದ ಉಪಕುಲಪತಿಗಳಾದ ಡಾ.ಡಿ.ಎಲ್.ಮಹಾಬಲೇಶ್ವರ್ ಅವರುಗಳು ಪಾಲ್ಗೊಂಡು ಐ.ಒ.ಟಿ. ತಂತ್ರಜ್ಞಾನದ ಹಲವಾರು ಸಾಧ್ಯತೆ ಮತ್ತು ಸವಾಲುಗಳ ಬಗ್ಗೆ ಚಿಂತನ–ಮಂಥನ ನಡೆಸಿದರು. ಸಮಾರಂಭದ ಅಧ್ಯಕ್ಷೀಯ ಭಾಷಣ ಮಾಡಿದ ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ಮುಖ್ಯಸ್ಥರಾದ ಡಾ.ಎಂ.ಆರ್.ಹುಲಿನಾಯ್ಕರ್ ಆವರು "ಭಾರತವು ಆರ್ಥಿಕವಾಗಿ ವಿಶ್ವದಲ್ಲಿ ಮೂರನೇ ಬಲಾಢ್ಯ ದೇಶವಾಗಿದ್ದು, ಡಿಜಿಟಲ್ ಇಂಡಿಯಾದಂತಹ ಯೋಜನೆಗಳಲ್ಲಿ ಸಮಾಜದ ಎಲ್ಲಾ ವರ್ಗದವರೂ ಸಕ್ರಿಯವಾಗಿ ತೊಡಗಿಸಿಕೊಳ್ಳಲೇಬೇಕಾದ ಅನಿವಾರ್ಯತೆಯಿದೆ, ಸ್ವಾತಂತ್ರ್ಯಾನಂತರದ ಏಳು ದಶಕಗಳಲ್ಲಿ ಉತ್ತಮ ಸಾಧನೆ ಮಾಡಿರುವ ನಮ್ಮ ದೇಶವು ಇನ್ನೂ ಹೆಚ್ಚಿನ ಸಾಧನೆ ಮಾಡುವುದರ ಮೂಲಕ ಮತ್ತಷ್ಟು ಹೊಳಪು ಪಡೆದುಕೊಂಡು ಶಕ್ತಿಯುತ ರಾಷ್ಟ್ರವಾಗುವ ಎಲ್ಲ ಅವಕಾಶಗಳು ನಮ್ಮ ಕಣ್ಮುಂದೆ ಇವೆ. ಯುವಶಕ್ತಿ ಮಾತ್ರ ಅದನ್ನು ಸಾಕಾರಗೊಳಿಸಬಹುದು ಇಂತಹ ಕಾರ್ಯಾಗಾರಗಳು ತಾಂತ್ರಿಕ ವಿದ್ಯಾರ್ಥಿಗಳಿಗೆ ಸಮರ್ಪಕ ಮಾರ್ಗದರ್ಶನ ನೀಡಬಲ್ಲವು" ಎಂದರು.

ಮಾನವ ಸಂಪನ್ಮೂಲ ವಿಭಾಗದ ನಿರ್ದೇಶಕರಾದ ಎಂ.ಎಸ್.ಪಾಟೀಲ್ ಆವರು "ವಿದ್ಯಾರ್ಥಿಗಳಲ್ಲಿ ಶೈಕ್ಷಣಿಕ ಪಠ್ಯಕ್ರಮದ ಹೊರತಾಗಿ ವಿಷಯ ಕಲಿಯುವಿಕೆ ಮತ್ತು ಅರಿವು ಮೂಡಿಸುವ ಸಲುವಾಗಿ ಈ ತರಹದ ಅಂತರರಾಷ್ಟ್ರೀಯ ಸಮಾವೇಶವನ್ನು ಆಯೋಜಿಸಿದ್ದು, ಅಗತ್ಯವಿರುವ ಸೂಕ್ಷ್ಮ ತಾಂತ್ರಿಕಜ್ಞಾನವನ್ನು ವಿದ್ಯಾರ್ಥಿ ಸಮುದಾಯ ಪಡೆದುಕೊಳ್ಳಬೇಕು. ಸಮಾವೇಶವನ್ನು ಆನ್‌ಲೈನ್ ಮತ್ತು ಆಫ್‌ಲೈನ್ ಹೈಬ್ರಿಡ್ ರೂಪದಲ್ಲಿ ಆಯೋಜಿಸಿರುವುದರಿಂದ ಇನ್ನೂರಕ್ಕೂ ಹೆಚ್ಚು ಸಂಶೋಧನಾ ಲೇಖನಗಳು ಬಂದಿದ್ದು, ಅವುಗಳನ್ನು ಪ್ರಕಟಿಸಲಾಗುವುದು" ಎಂದರು. ಸಮಾರಂಭದಲ್ಲಿ ಮಂಡಿಸಿದ ಸಂಶೋಧನಾ ಲೇಖನಗಳ ನಡಾವಳಿ ಮತ್ತು ಸಿ.ಡಿ.ಗಳನ್ನು ಬಿಡುಗಡೆ ಮಾಡಲಾಯಿತು. ಸಮಾರಂಭದಲ್ಲಿ ಕುಮಾರಿ ದೀಪಾ ಆರಾಧ್ಯಮಠ ಮತ್ತು ಅನುಷಾ ಪ್ರಾರ್ಥಿಸಿ, ಪ್ರಾಂಶುಪಾಲರಾದ ಡಾ.ನರೇಂದ್ರ ವಿಶ್ವನಾಥ್ ಸ್ವಾಗತಿಸಿ, ಡಾ.ಸಿ.ನಾಗರಾಜ್ ನಿರ್ವಹಿಸಿ, ಸಮಾವೇಶದ ಮುಖ್ಯಸಂಯೋಜಕರಾದ ಡಾ.ದಿನೇಶ್ ವಂದಿಸಿದರು. ಹಲವಾರು ರಾಜ್ಯ ಮತ್ತು ಹತ್ತು ದೇಶಗಳ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಭಾಗವಹಿಸಿ ಚರ್ಚೆ ಮತ್ತು ಕಾರ್ಯಾಗಾರಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು ತಮ್ಮ ಜ್ಞಾನವನ್ನು ವಿಸ್ತಾರ ಮಾಡಿಕೊಂಡರು.

ಸಮಾರಂಭದಲ್ಲಿ ಶ್ರೀದೇವಿ ವೈದ್ಯಕೀಯ ಸಂಸ್ಥೆಯ ನಿರ್ದೇಶಕರಾದ ಡಾ.ರಮಣ್ ಎಂ ಹುಲಿನಾಯ್ಕರ್, ಟ್ರಸ್ಟಿಗಳಾದ ಅಂಬಿಕಾ ಎಂ ಹುಲಿನಾಯ್ಕರ್, ನೇತ್ರತಜ್ಞರಾದ ಡಾ.ಲಾವಣ್ಯ. ಆಡಳಿತಾಧಿಕಾರಿಯಾದ ಟಿ.ವಿ.ಬ್ರಹ್ಮದೇವಯ್ಯ, ವಿವಿಧ ವಿಭಾಗಗಳ ಮುಖ್ಯಸ್ಥರಾದ ಡಾ.ಕೆ.ಎಸ್.ರಾಮಕೃಷ್ಣ, ಡಾ.ಎನ್.ಚಂದ್ರಶೇಖರ್, ಡಾ.ಬಸವೇಶ್, ಡಾ.ಜಿ.ಮಹೇಶ್‌ಕುಮಾರ್, ಡಾ.ಸುಹಾಸ್, ಡಾ.ಚರಣ್, ಡಾ.ಕಿಶೋರ್‌ಕುಮಾರ್, ಪ್ರೊ.ಕೆ.ಪಿ.ಚಂದ್ರಯ್ಯ, ಡಾ.ಪಿ.ಜೆ.ಸದಾಶಿವಯ್ಯ, ಪ್ರೊ.ಐಜಾಜ್ ಅಹಮದ್ ಷರೀಫ್, ಪ್ರೊ.ಜಿ.ಹೆಚ್.ರವಿಕುಮಾರ್, ಪ್ರೊ.ಸಿ.ವಿ.ಷಣ್ಮುಖಸ್ವಾಮಿ, ಡಾ.ಉಮೇಶ್, ಡಾ.ಪ್ರದೀಪ್ ಕೆ.ಜಿ.ಎಂ., ಡಾ.ಮಂಜುಳಾ ಹಾಗೂ ಇತರೆ ಉಪನ್ಯಾಸಕ ವರ್ಗದವರು ಮತ್ತು ವಿದ್ಯಾರ್ಥಿಗಳು ಭಾಗವಹಿಸಿದ್ದರು.

**ಅರ್ಚನೆ**



ಡಾ. ಕೆ. ಅನಂತರಾಮು
ನಿವೃತ್ತ ಪ್ರಾಧ್ಯಾಪಕರು, ಮೈಸೂರು

# ಶ್ರೀಮಾತೆಯರ ಬದುಕಿನ ಸಂಕೀರ್ಣ ಕ್ಷಣಗಳು ಭಗವಂತನು ಸ್ತ್ರೀಯಾಗಿ ಅವತರಿಸುವ ಸಡಗರ

**ಕಳೆದ ಸಂಚಿಕೆಯಲ್ಲಿ:** ಶ್ರೀಮಾತೆ ಅವರು ಕಲ್ಕತ್ತಕ್ಕೆ 100ಕಿ.ಮೀ.ದೂರದಲ್ಲಿರುವ ಜಯರಾಮಬಾಟಿ ಎನ್ನುವ ಗ್ರಾಮದಲ್ಲಿ ರಾಮಚಂದ್ರ ಮುಖರ್ಜಿ ಮತ್ತು ಶ್ಯಾಮಸುಂದರಿ ಎನ್ನುವ ದಂಪತಿಗೆ 1853ರಲ್ಲಿ ಜನಿಸಿದರು. ಅವರಿಗೆ 5 ವರ್ಷವಾದಾಗ ಅವರ ತಂದೆ ತಾಯಿಗಳು ದಕ್ಷಿಣೇಶ್ವರದಲ್ಲಿದ್ದ ಶ್ರೀ ರಾಮಕೃಷ್ಣ ಪರಮಹಂಸರೊಡನೆ ಅವರ ವಿವಾಹ ಮಾಡುತ್ತಾರೆ. ಪ್ರಾಪ್ತ ವಯಸ್ಸಿಗೆ ಶ್ರೀಮಾತೆ ಬಂದಾಗ ಅವರನ್ನು ದಕ್ಷಿಣೇಶ್ವರಕ್ಕೆ ಕರೆದುಕೊಂಡು ಬರಲಾಗುತ್ತದೆ. ಅಲ್ಲಿನ ಅತಿ ಸಣ್ಣ ಕೊಠಡಿಯಲ್ಲಿ ವಾಸ ಮಾಡುವ ಶ್ರೀಮಾತೆ ಶ್ರೀರಾಮಕೃಷ್ಣ ಪರಮಹಂಸರಿಗೂ ಬಂದ ಅತಿಥಿಗಳಿಗೂ ಅಡುಗೆ ಮಾಡಿ ಊಟ ಬಡಿಸುತ್ತಾರೆ. ಜೊತೆಗೆ ಅಧ್ಯಾತ್ಮದಲ್ಲಿ ಶ್ರೀ ರಾಮಕೃಷ್ಣಪರಮಹಂಸರ ಮಾರ್ಗದರ್ಶನದಲ್ಲಿ ಕಠಿಣ ಸಾಧನೆ ಮಾಡುತ್ತಾರೆ. ಪರಮಹಂಸ ದಂಪತಿ ಬದುಕಿನುದ್ದಕ್ಕೂ ತೀವ್ರವಾದ ಬ್ರಹ್ಮಚರ್ಯೆವತ್ರವನ್ನು ಪಾಲಿಸುತ್ತಾರೆ. ಶ್ರೀಮಾತೆ ಅಧ್ಯಾತ್ಮ ಸಾಧನೆಯನ್ನು ಕಂಡು ಬೆರಗಾಗಿ ಶ್ರೀ ರಾಮಕೃಷ್ಣ ಪರಮಹಂಸರೇ ಅವರಲ್ಲಿ ಶ್ರೀ ಕಾಳಿದೇವಿಯನ್ನು ಕಂಡು ಸ್ವತಃ ತಾವೇ ಶ್ರೀಮಾತೆಗೆ ಪೂಜೆ ಮಾಡುತ್ತಾರೆ..... ಮುಂದೆ ಓದಿ

## ದೇವಿ ತ್ರಿಪುರಸುಂದರೀಷೋಡಶೀ ಮಹಾವಿದ್ಯಾ

ವೈಶಾಖಮಾಸದ ಅಮಾವಾಸ್ಯೆಯು ಕಾಳಿಮಾತೆಯನ್ನು "ಫಲಹಾರಿಣೀ" ಎಂಬ ಭಕ್ತಿ ಭಾವದಿಂದ ಪೂಜಿಸುವ ದಿನವಾಗಿದೆ. ಅಂದು ತನ್ನನ್ನು ಪೂಜಿಸುವವರ ಪೂರ್ವಾರ್ಜಿತ ಕರ್ಮಗಳನ್ನೆಲ್ಲಾ ಕಾಳಿಮಾತೆಯು ಅಪಹರಿಸಿಬಿಡುತ್ತಾಳಾದ್ದರಿಂದ ಅವಳಿಗೆ ಫಲಹಾರಿಣಿ ಎಂಬ ಬಿರುದು ಕೂಡಿಕೊಂಡಿದೆ. ಜಗನ್ಮಾತೆಯು 'ದಶಮಹಾವಿದ್ಯಾಸ್ವರೂಪಿಣಿ' ಎಂಬ ಹತ್ತು ನಾಮಗಳಿಂದ ಖ್ಯಾತಳಾಗಿದ್ದಾಳೆ. ಆ ಪೈಕಿ ತ್ರಿಪುರಸುಂದರಿಷೋಡಶೀ ಎಂಬುದು ಒಂದು. ಆ ಸ್ವರೂಪದಲ್ಲಿ ಜಗನ್ಮಾತೆಯು ಯಾವಾಗಲೂ ಹದಿನಾರರ ಹರೆಯದ ಪರಮಲಾವಣ್ಯವತಿಯಾಗಿ ಬೆಳಗುತ್ತಿರುತ್ತಾಳಾದ್ದರಿಂದ ಷೋಡಶಿ (ಹದಿನಾರರ ಪ್ರಾಯದವಳು) ಎಂಬ ನಾಮವು ಅವಳಿಗೆ ಅನ್ವರ್ಥವಾಗಿದೆ.

ಪರಮಹಂಸರು ಶ್ರೀಮಾತೆಯವರಲ್ಲಿ ಜಗನ್ಮಾತೆಯ ಸ್ವರೂಪವನ್ನೇ ಕಂಡರು. ಫಲಹಾರಿಣಿ ಕಾಳಿಮಾತೆಯನ್ನು ಪೂಜಿಸುವ ದಿನವನ್ನೇ ಗೊತ್ತುಪಡಿಸಿ ಪರಮಹಂಸರು ತಮ್ಮ ಕೊಠಡಿಯಲ್ಲಿಯೇ ಶ್ರೀಮಾತೆಯವರನ್ನು ಉನ್ನತವಾದ ಪೀಠದ ಮೇಲೆ ಕೂರಿಸಿ, ಷೋಡಶಿ ರೂಪವನ್ನು ಆವಾಹನೆ ಮಾಡಿ, ಪರಿಷ್ಕಾರವಾದ 'ಷೋಡಶೋಪಚಾರಪೂಜೆ' ಯನ್ನು ನೆರವೇರಿಸಿದರು. ತಮ್ಮ ತಪಸ್ಸಿನ ಫಲವನ್ನು ಅವರಿಗೆ ಧಾರೆಯೆರೆದರು. ಅದರ ಫಲವಾಗಿ ಶ್ರೀಮಾತೆಯವರು ಜಗನ್ಮಾತೆಯಾಗಿ ಅಪಾರವಾದ ಆಧ್ಯಾತ್ಮಿಕ ಸಂಪತ್ತಿಗೆ ಒಡತಿಯಾದರು. ಆಗ ಶ್ರೀಮಾತೆಯವರಿಗೆ 19 ವರ್ಷ ವಯಸ್ಸಾಗಿತ್ತು. ಪರಮಹಂಸರು ಶ್ರೀಮಾತೆಯವರನ್ನು 'ನೀವು' ಎಂದು ಬಹುವಚನದಲ್ಲಿಯೇ ಮಾತನಾಡಿಸುತ್ತಿದ್ದರು. ಶ್ರೀಮಾತೆಯವರು ದಕ್ಷಿಣೇಶ್ವರದಲ್ಲಿ 13 ವರ್ಷಗಳಷ್ಟು ದೀರ್ಘಕಾಲ ಪರಮಹಂಸರ ಸೇವೆ ಮಾಡಿದರು.



ಪರಮಹಂಸರು ದಕ್ಷಿಣೇಶ್ವರದಲ್ಲಿ ಕೈಗೊಂಡ ಮಹೋಜ್ವಾಲ ಸಾಧನೆಸಿದ್ಧಿಗಳಿಗೆಲ್ಲ ಶ್ರೀಮಾತೆಯವರು ಸಾಕ್ಷಿಯಾದರು. ಪರಮಹಂಸರು ಕಾಳಿಮಾತೆಯನ್ನು ಕಣ್ಣಾರೆ ಕಂಡರು. ಕ್ರಮಕ್ರಮವಾಗಿ ಅವರ ಕೀರ್ತಿ ಸರ್ವತ್ರ ಹಬ್ಬಿತು. ವಿವೇಕಾನಂದರೇ ಮೊದಲಾದ ಸನ್ಯಾಸಿಶಿಷ್ಯರು ಅವರನ್ನು ಸುತ್ತುವರಿದರು. ತಮ್ಮ ದಿವ್ಯಾನುಭವಗಳನ್ನೂ ದಿವ್ಯೋಪದೇಶಗಳನ್ನೂ ಪರಮಹಂಸರು ಭಕ್ತಕೋಟಿಗೆ ಬೋಧಿಸಿದರು.

***

## ತಾರಕೇಶ್ವರನ ಸನ್ನಿಧಾನ

ಪರಮಹಂಸರು ಗಂಟಲಿನ ಕ್ಯಾನ್ಸರ್‌ಗೆ ತುತ್ತಾಗಿ ಹಾಸುಗೆ ಹಿಡಿದಾಗ ಶ್ರೀಮಾತೆ ಅವರು ತುಂಬಾ ದುಃಖಿತೆಯಾದರು. ಕೊಲ್ಕೋತ್ತೆಗೆ ಸಮೀಪದಲ್ಲಿ ತಾರಕೇಶ್ವರ ಎಂಬೊಂದು ಜಾಗವಿದೆ ಅಲ್ಲೊಂದು ಶಿವನ ದೇವಾಲಯವಿದೆ. ಆ ಶಿವನಿಗೂ ತಾರಕೇಶ್ವರ ಎಂದೇ ಹೆಸರು. ಭಕ್ತಜನರನ್ನು ಕಷ್ಟಕೂಟಲೆಗಳಿಂದ ದಾಟಿಸುತ್ತಾನಾದ್ದರಿಂದ ಅವನಿಗೆ ಆ ಹೆಸರು ಕೂಡಿಕೊಂಡಿದೆ. ಪರಮಹಂಸರು ಗುಣಮುಖರಾಗಬೇಕೆಂಬ ಕಳಕಳಿಯಿಂದ ಶ್ರೀಮಾತೆಯವರು ತಾರಕೇಶ್ವರನ ಸನ್ನಿಧಾನಕ್ಕೆ ಹೋದರು. ಅನ್ನನೀರುಗಳನ್ನು ತೊರೆದು ಎರಡು ದಿನಗಳ ಕಾಲ ಶಿವನು ಪರಮಹಂಸರನ್ನು ಕಾಪಾಡಬೇಕೆಂದು ಪ್ರಾರ್ಥಿಸಿದರು. ಮೂರನೆಯ ದಿನ ಪ್ರಾರ್ಥಿಸುವಾಗ ಅವರಿಗೆ ಇದ್ದಕ್ಕಿದ್ದಂತೆ ಯಾರೋ ಮಣ್ಣಿನ ಮಡಕೆಗಳನ್ನು ಬಡಿಗೆಯಿಂದ ಬಡಿಬಡಿದು ಒಡೆದುಹಾಕುತ್ತಿರುವಂತಹ ಸದ್ದು ಕೇಳಿಸಿತು.

ಆಗ ಮಿಂಚಿನಂತೆ ಸಂದೇಶವೊಂದು ಶ್ರೀಮಾತೆಯವರ ಹೃದಯಾಂತರಾಳದಲ್ಲಿ ಸುಳಿದುಹೋಯಿತು. "ಈ ಜಗತ್ತಿನಲ್ಲಿ ಯಾರು ಗಂಡ, ಯಾರು ಹೆಂಡತಿ, ಯಾರಿಗೆ ಯಾರು ಸಂಬಂಧ! ಹುಟ್ಟಿದವರ ಶರೀರಗಳೆಂಬ ಮಡಿಕೆಗಳನ್ನು ಯಮರಾಜನು ಬಡಿಗೆಯಿಂದ ಬಡಿದು ಪುಡಿಮಾಡದೆ ಬಿಡುತ್ತಾನೆಯೇ? ಯಾರನ್ನು ತಾನೇ ರಕ್ಷಿಸಿಕೊಳ್ಳುವುದು ಸಾಧ್ಯ" ಎಂಬ ಕಟುಸತ್ಯದ ಅರಿವಾಯಿತು. ಬೇರೆ ದಾರಿಕಾಣದೆ ಮರಳಿಬಂದರು.

"ಯಾರಿಗೆ ಯಾರುಂಟು ಎರವಿನ ಸಂಸಾರ, ನೀರ ಮೇಗಳ ಗುಳ್ಳೆ ನಿಜವಲ್ಲ ಹರಿಯೇ" ಎಂದು ಪುರಂದರದಾಸರು ಹಾಡಿರುವುದನ್ನೂ ನಾವು ನೆನೆಯಬಹುದು. ತಮ್ಮ ಮರಣಕಾಲಕ್ಕೆ ಪರಮಹಂಸರು ತಾವು ಆರಂಭಿಸಿದ್ದ ಲೋಕೋಪಕಾರಿಯಾದ ಕಾರ್ಯಗಳನ್ನೆಲ್ಲಾ ಮುಂದುವರಿಸಬೇಕೆಂದು ಶ್ರೀಮಾತೆಯವರಿಗೆ ಆದೇಶವಿತ್ತರು.

## ಶ್ರೀಮಾತೆಯವರ ಯಾತ್ರೆಗಳು

ಪರಮಹಂಸರು 1886ರಲ್ಲಿ ಮಹಾಸಮಾಧಿಯನ್ನು ಪಡೆದುಕೊಂಡಾಗ ಶ್ರೀಮಾತೆಯವರಿಗೆ 33ನೇ ವರ್ಷ. ವಿಯೋಗದ ದುಃಖವನ್ನು ಶಮನಗೊಳಿಸಿಕೊಳ್ಳುವ ಸಲುವಾಗಿ ತೀರ್ಥಯಾತ್ರೆಯನ್ನು ಕೈಗೊಂಡರು, ಕೆಲವು ಭಕ್ತೆಯರೂ ಪರಮಹಂಸರ ನೇರಶಿಷ್ಯರಾದ ಸ್ವಾಮಿಯೋಗಾನಂದರೂ ಮಾತೆಯವರ ಜೊತೆಯಲ್ಲಿದ್ದರು. ಬೆಳಕಿನ ಕಾಯದಲ್ಲಿ ಪರಮಹಂಸರು ಶ್ರೀಮಾತೆಯವರಿಗೆ ದರ್ಶನವಿತ್ತು ಆಜ್ಞೆ ಮಾಡಿದುದರ ಫಲವಾಗಿ ಎಂದಿನಂತೆ ಮುತ್ತೈದೆಯರಿಗೆ ಒಪ್ಪುವ ಲಕ್ಷಣಗಳಿಂದಲೇ ಶೋಡಷಿಯಾಗಿ ಇದ್ದುಬಿಟ್ಟರು.

ದೇವಘರ್, ಕಾಶೀಪಟ್ಟಣ, ಅಯೋಧ್ಯೆಗಳ ದರ್ಶನಮಾಡುತ್ತಾ, ದಿವ್ಯದರ್ಶನಗಳಿಂದ ದೀಪ್ತರಾಗುತ್ತಾ ಶ್ರೀಮಾತೆಯವರು ಶ್ರೀಕೃಷ್ಣನ ಲೀಲಾಭೂಮಿಯಾದ ಬೃಂದಾವನವನ್ನು ಪ್ರವೇಶಿಸಿದರು. ಆ ಕ್ಷೇತ್ರವು ಅವರಿಗೆ ಇಷ್ಟವಾಗಿ, ಒಂದು ವರ್ಷಕಾಲ ಅಲ್ಲಿಯೇ ನೆಲೆಸಿದರು. ರಾಧೆ ಮತ್ತು ಗೋಪಿಕಾಸ್ತ್ರೀಯರ ಕೃಷ್ಣವಿರಹದ ಪೌರಾಣಿಕ ಚಿತ್ರಗಳು ಆಗಾಗ ಶ್ರೀಮಾತೆಯವರ ಚಿತ್ತದಲ್ಲಿ ಸುಳಿದಾಡಿ ಅವರು ದುಃಖಪರವಶೆಯಾಗಿಬಿಡುತ್ತಿದ್ದರು. ಆಗೊಮ್ಮೆ ಪರಮಹಂಸರು ಪ್ರತ್ಯಕ್ಷರಾಗಿ " ಇದೇನಿದು, ನೀವೇಕೆ ಇಷ್ಟೊಂದು ಅಳುತ್ತಿದ್ದೀರಿ? ನಾನಿಲ್ಲೇ ಇದ್ದೇನಲ್ಲಾ! ನಾನು ಇನ್ನೆಲ್ಲಿಗೆ ತಾನೆ ಹೋಗುವುದಕ್ಕೆ ಸಾಧ್ಯ? ಆ ಕೋಣೆಯಿಂದ ಈ ಕೋಣೆಗೆ ಬಂದಿದ್ದೇನಷ್ಟೇ" ಎಂದು ಸಮಾಧಾನಿಸಿದರು.

ಶ್ರೀಮಾತೆಯವರು ಸಮಯ ದೊರೆತಾಗಲೆಲ್ಲ ಧ್ಯಾನಮಗ್ನರಾಗುತ್ತಿದ್ದರು, ಆಗಾಗ ಸಮಾಧಿ ಸ್ಥಿತಿಗೂ ತಲುಪುತ್ತಿದ್ದರು. ಬೃಂದಾವನದ ತುಂಬಾ ವಿವಿಧ ಕೃಷ್ಣದೇವಾಲಯಗಳಿವೆ. ಶ್ರೀಮಾತೆಯವರು ಅವುಗಳನ್ನೆಲ್ಲಾ ಸಂದರ್ಶಿಸಿದರು. ಇಡೀ ಪಟ್ಟಣವನ್ನು ಪ್ರದಕ್ಷಿಣೆ ಮಾಡುವ 'ಬೃಂದಾವನ ಪರಿಕ್ರಮ'ವೆಂಬ ಆಚರಣೆಯನ್ನು ನೆರವೇರಿಸಿದರು. ಅದಕ್ಕೆ 15 ದಿನಗಳು ಹಿಡಿದವು. ಸ್ವಾಮಿಯೋಗಾನಂದರಿಗೆ ಮಂತ್ರದೀಕ್ಷೆಯಾಗಿರಲಿಲ್ಲ, ಪರಮಹಂಸರು ಕಾಣಿಸಿಕೊಂಡು ಆಜ್ಞೆ ಮಾಡಿದುದೇ ಕಾರಣವಾಗಿ ಅದೇ ಪ್ರಥಮವಾಗಿ ಶ್ರೀಮಾತೆಯವರು ಸ್ವಾಮಿಯೋಗಾನಂದರಿಗೆ ಮಂತ್ರದೀಕ್ಷೆಯಿತ್ತು ಹರಸಿದರು.

## ಪಂಚತಪವೆಂಬ ಕಠೋರ ಸಾಧನೆ

ವೃಂದಾವನ ಯಾತ್ರೆಯಿಂದ ಮರಳಿಬಂದ ಬಳಿಕ ಶ್ರೀಮಾತೆಯವರು ನಿಶ್ಚಿತವಾದ ನೆಲೆಯಿಲ್ಲದೆ ಕಾಮಾರಪುಕುರ ಮತ್ತು ಜಯರಾಮಬಾಟಿಗಳಲ್ಲಿ ನೆಲೆಸುವುದು, ತೀರ್ಥಯಾತ್ರೆ ಮಾಡುವುದು, ಕಲ್ಕತ್ತದ ಭಕ್ತರ ಮನೆಗಳಲ್ಲಿ ಅಥವಾ ಬಾಡಿಗೆ ಮನೆಗಳಲ್ಲಿ ವಾಸ ಮಾಡುವುದು ಎಂಬಂತೆ ತಮ್ಮ 44ನೆಯ ವಯಸ್ಸಿನವರೆಗೆ ವನವಾಸ ಅಜ್ಞಾತವಾಸವೆನಿಸಬಹುದಾದ ಸಾಧನಾಭರಿತ ಜೀವನವನ್ನೇ ಸಾಗಿಸಿದರು. ಪರಮಹಂಸರು ತಮ್ಮ ಅಂತ್ಯಕಾಲದಲ್ಲಿ ಮಾತೆಯವರನ್ನು ಕುರಿತು "ನಾನು ಕಾಲವಾದ ತರುವಾಯ ಯಾರ ಕೃಪೆಗೂ ಕೈಯೊಡ್ಡಬಾರದು, ಕಾಮಾರಪುಕುರಕ್ಕೆ ಹೋಗಿರಿ. ಏನು ಸಿಗುತ್ತದೋ ಅದರಲ್ಲೇ ಜೀವನ ನಡೆಸಿರಿ. ಅನ್ನ, ಸೊಪ್ಪು, ಏನಿದ್ದರೆ ಅದು. ಹರಿಯ ನಾಮಸ್ಮರಣೆ ಮಾಡುತ್ತಾ ದಿನಗಳೆಯಿರಿ" ಎಂದು ಸೂಚಿಸಿದ್ದರು. ಶ್ರೀಮಾತೆಯವರು ಅದರಂತೆಯೇ ನಡೆದುಕೊಂಡರು. ಕಾಮಾರಪುಕುರದಲ್ಲಿದ್ದಾಗ ಒಂದು ಪುಟ್ಟ ಕೊಠಡಿಯಲ್ಲಿ ವಾಸಮಾಡುತ್ತಾ ಒಂದಿಷ್ಟು ಅನ್ನ ಬೇಯಿಸಿಕೊಳ್ಳುತ್ತಿದ್ದರು. ಆ ಅನ್ನಕ್ಕಿಷ್ಟು ಉಪ್ಪು ಬೆರೆಸಿಕೊಂಡು ತಿನ್ನೋಣವೆಂದರೆ ಆ ಉಪ್ಪು ಕೊಳ್ಳುವಷ್ಟು ಕಾಸೂ ಶ್ರೀಮಾತೆಯವರ ಕೈಲಿರಲಿಲ್ಲ.

ಶ್ರೀಮಾತೆಯವರ ದಾರುಣವಾದ ಬಡತನದ ವಾರ್ತೆ ಕಲ್ಕತ್ತದ ಭಕ್ತರ ಕಿವಿಯಮೇಲೆ ಬಿದ್ದಾಗ ಅವರೆಲ್ಲಾ ಕೂಡಿ ಶ್ರೀಮಾತೆಯವರನ್ನು ಕಲ್ಕತ್ತನಗರಕ್ಕೆ ಬರಮಾಡಿಕೊಂಡು ಅಲ್ಲಿ ಇಲ್ಲಿ ಇರುವ ವ್ಯವಸ್ಥೆ ಮಾಡಿದರು. ಆಗಿನ್ನೂ ಶ್ರೀಮಾತೆಯವರು ಮಧ್ಯವಯಸ್ಕರಾಗಿದ್ದುದರಿಂದ ಪುರಷರ ಕಣ್ಣಿಗೆ ಬೀಳದೆ ಲಜ್ಜಾಪಟಾವೃತೆಯಾಗಿಯೇ ಇದ್ದುಬಿಡುತ್ತಿದ್ದರು. ಪ್ರಾಪಂಚಿಕ ಲಾಭಗಳಿಗಾಗಿ ತಮ್ಮನ್ನು ಪೀಡಿಸುತ್ತಿದ್ದ ಬಂಧು ಜನರ ನಡುವೆಯೇ ಜಗನ್ಮಾತೆ ಹೇಗೋ ಕಾಲನೂಕುತ್ತಿದ್ದರು.

ಕಲ್ಕತ್ತದ ನೀಲಾಂಬರಬಾಬು ಎಂಬುವವರ ಬಾಡಿಗೆ ಮನೆಯಲ್ಲಿ ಶ್ರೀಮಾತೆಯವರು ವಾಸಿಸುತ್ತಿದ್ದ ಕಾಲದಲ್ಲಿ ಲೋಕದ ಸ್ತ್ರೀಯರಿಗಾಗಿ 'ಪಂಚತಪ' ಎಂಬ ಹೆಸರಿನ ಘೋರತಪಸ್ಸನ್ನು ಆಚರಿಸಿದರು. ಯೋಗಿನ್‌ಮಾ ಎಂಬ ಸಾಧಕಿಯೂ ಶ್ರೀಮಾತೆಯವರೊಡನೆ ಕೂಡಿಕೊಂಡಳು. ತಾವು ವಾಸವಿದ್ದ ಮನೆಯ ತಾರಸಿಯ ಮೇಲೆ ಆ ತಪಸ್ಸನ್ನು ಒಂದು ಸಪ್ತಾಹ ಪರ್ಯಂತ ಆಚರಿಸಿದರು. ಸುತ್ತ ನಾಲ್ಕು ಕಡೆಗಳಲ್ಲಿ ಬೆಂಕಿ ಒಟ್ಟಿಕೊಳ್ಳಬೇಕು, ಮೇಲೆ ಉರಿಯುವ ಸೂರ್ಯನಿರುತ್ತಾನೆ, ಹೀಗೆ ಐದು ಜ್ವಾಲೆಗಳ ಮಧ್ಯದಲ್ಲಿ ಕುಳಿತು ಸೂರ್ಯೋದಯದಿಂದ ಸೂರ್ಯಾಸ್ತದವರೆಗೆ ಅನ್ನಾಹಾರಗಳಿಲ್ಲದೆ ನಾಮಜಪ ಮಾಡುವುದೇ ಪಂಚತಪ. ಆ ಜ್ವಾಲೆಯು ಅಸಹನೀಯವಾಯಿತಾದರೂ ಶ್ರೀಮಾತೆಯವರು ತಮ್ಮ ಆಧ್ಯಾತ್ಮಿಕ ಬಲದಿಂದ ಅದರಲ್ಲಿ ಯಶಸ್ವಿಯಾದರು. ತೀವ್ರವಾದ ಉಷ್ಣತೆಯ ದೆಸೆಯಿಂದಾಗಿ ಶ್ರೀಮಾತೆಯವರ ಸುಮನೋಹರ ಕಾಯವು ಮುರುಟಿ ಕಪ್ಪಾಗಿ ಹೋಯಿತು, ಯೋಗಿನ್‌ಮಾ ಕೂಡ ಆ ತಪಸ್ಸಿನಲ್ಲಿ ಯಶಸ್ವಿಯಾದಳು.

## ಉದ್ಬೋಧನಕ್ಕೆ ಪ್ರವೇಶ

ಶ್ರೀಮಾತೆಯವರು ಕೊಲ್ಕೊತ್ತೆಯ ಭಕ್ತರ ಮನೆಗಳಲ್ಲೋ, ಬಾಡಿಗೆ ಮನೆಗಳಲ್ಲೋ ಸಂಕೋಚದಿಂದ ಕಾಲನೂಕುತ್ತಿರುವುದನ್ನು ಕಂಡು ಪರಮಹಂಸರ ನೇರ ಶಿಷ್ಯರಲ್ಲೊಬ್ಬರಾದ ಸ್ವಾಮಿ ಶಾರದಾನಂದರು ಬಹಳವಾಗಿ ನೊಂದುಕೊಂಡರು. ಆಗ ಅವರು ಸಾಲ ಮಾಡಿಯೇ ಕೊಲ್ಕೊತ್ತೆಯ ಬಾಗ್ ಬಜಾರ್ ಎಂಬಲ್ಲಿ ಎರಡು ಅಂತಸ್ತುಗಳ ಒಂದು ಭವನವನ್ನು ನಿರ್ಮಿಸಿದರು. ಅದಕ್ಕೆ 'ಉದ್ಬೋಧನ' ಎಂದು ಹೆಸರಾಯಿತು. ಅದರ ಕೆಳಅಂತಸ್ತಿನಲ್ಲಿ ಸ್ವಾಮಿ ಶಾರದಾನಂದರೇ ಮೊದಲಾದ ಕೆಲವು ಸನ್ಯಾಸಿಗಳು ವಾಸಿಸುತ್ತಿದ್ದರು. ಮೇಲಂತಸ್ತಿನಲ್ಲಿ ಶ್ರೀಮಾತೆಯವರು ಕೆಲವು ಭಕ್ತೆಯರೊಡನೆ ವಾಸಿಸುತ್ತಿದ್ದರು. 1909 ರಲ್ಲಿ ತಮ್ಮ 56ನೆಯ ವಯಸ್ಸಿನಲ್ಲಿ ಉದ್ಬೋಧನವನ್ನು ಪ್ರವೇಶಿಸಿದ ಶ್ರೀಮಾತೆಯವರು, 1920ರಲ್ಲಿ ತಾವು ಮುಕ್ತರಾಗುವವರೆಗೆ ಅಲ್ಲಿಯೇ ನೆಲೆಸಿದ್ದರು. ಸ್ವಾಮಿ ವಿವೇಕಾನಂದರಿಂದ ಸ್ಥಾಪನೆಗೊಂಡ ರಾಮಕೃಷ್ಣ ಮಠದ ಬಂಗಾಳಿ ಮಾಸಪತ್ರಿಕೆ 'ಉದ್ಬೋಧನ' ಎಂಬುದು ಕೂಡ ಆ ಭವನದಿಂದಲೇ ಪ್ರಕಟಗೊಳ್ಳುತ್ತಿತ್ತು. ಉದ್ಬೋಧನ ಎಂದರೆ ಶ್ರೇಷ್ಠವಾದ ಜ್ಞಾನ, ಎಚ್ಚರವನ್ನುಂಟುಮಾಡುವ ಜ್ಞಾನ ಎಂದರ್ಥ.

## ಕರ್ಮಯೋಗಮಯವಾದ ಜೀವನ

ಶ್ರೀಮಾತೆಯವರ ತಮ್ಮಂದಿರಲ್ಲಿ ಅಭಯಚರಣರೂ ಒಬ್ಬನಾಗಿದ್ದರು. ಅವರು ಜಾಣನಾಗಿದ್ದು ಕೊಲ್ಕೊತ್ತೆಯ ಮೆಡಿಕಲ್ ಕಾಲೇಜಿನಲ್ಲಿ ಓದಿ, ಉದ್ಯೋಗಕ್ಕೆ ಸೇರುವುದರಲ್ಲಿದ್ದರು. ಆದರೆ ಅಷ್ಟರಲ್ಲಿಯೇ ಅವರು ವಿಧಿಗೆ ಗುರಿಯಾಗಿ ಕಾಲರಾ ರೋಗಕ್ಕೆ ತುತ್ತಾಗಿ ಕಣ್ಣುಮುಚ್ಚಿಕೊಂಡುಬಿಟ್ಟರು. ಆ ಹೊತ್ತಿನಲ್ಲಿ ಅವರ ಮಡದಿ ಸುರಬಾಲೆಯು ಗರ್ಭಿಣಿಯಾಗಿದ್ದರು. ಮರಣಕಾಲದಲ್ಲಿ ಅಭಯಚರಣನು ಸುರಬಾಲೆಯನ್ನು ಕಾಪಾಡಬೇಕೆಂದು ಶ್ರೀಮಾತೆಯವರಲ್ಲಿ ಮೊರೆಯಿಟ್ಟನು. ಶ್ರೀಮಾತೆಯವರ ಮನಸ್ಸು ಕರಗಿಹೋಯಿತು. ಕಾಪಾಡಲು ಒಪ್ಪಿದರು. ಗಂಡನ ಮರಣದಿಂದ ಸುರಬಾಲೆ ಹುಚ್ಚಿಯಂತಾಗಿಬಿಟ್ಟಳು. ಮುಂದಕ್ಕೆ ಅವರೊಂದು ಹೆಣ್ಣುಮಗುವಿಗೆ ಜನ್ಮವಿತ್ತರು. ಅದಕ್ಕೆ ರಾಧಾರಾಣಿ ಎಂದು ಹೆಸರಿಟ್ಟು, ರಾಧಿ ಎಂದು ಕರೆಯುತ್ತಿದ್ದರು. ಆ ರಾಧಿಯು ಬೆಳೆದಮೇಲೆ ತಾಯಿಯಂತೆಯೇ ಹುಚ್ಚುಹುಚ್ಚಾಗಿ ವರ್ತಿಸತೊಡಗಿದಳು. ಸುರಬಾಲೆಯಾಗಲಿ ರಾಧಿಯಾಗಲಿ ಶ್ರೀಮಾತೆಯವರಿಗೆ ಉಂಟುಮಾಡುತ್ತಿದ್ದ ಕಷ್ಟಸಂಕಟಗಳಿಗೆ ತುದಿಮೊದಲೇ ಇರಲಿಲ್ಲ.

(ಮುಂದುವರಿಯುತ್ತದೆ)

Printed and Published by **Shridevi Media Center,** Lingapura, NH 4, Sira Road, Tumakuru - 572106,, Mob: 94480 82844 and
Printed at **Maruthi Printing Press,** No.90/6-1. 1st cross, Vittal Nagar West, Near Marvel Apartment, Bengaluru-560026. Editor: **Ambika M Hulinaykar**